12. ಕೊಟ್ಟಿರುವ ಆಕೃತಿಯ ಸುತ್ತಳತೆ (ಸಾಧಾರಣ)

A) 12 ಸೆಂ. ಮೀ. B) 24 ಸೆಂ. ಮೀ. C) 18 ಸೆಂ. ಮೀ. D) 16 ಸೆಂ. ಮೀ.




13. ಕೊಟ್ಟಿರುವ ಆಯತದ ಚಿತ್ರವು ಘಟಕಚೌಕಗಳನ್ನು ಹೊಂದಿವೆ. ಇವುಗಳ ವಿಸ್ತೀರ್ಣ (ಕಠಿಣ)

A) 15 ಚ. ಸೆಂ. ಮೀ. B) 18 ಚ. ಸೆಂ. ಮೀ. C) 12 ಚ. ಸೆಂ. ಮೀ. D) 20 ಚ. ಸೆಂ. ಮೀ.




14. ಈ ಚಿತ್ರದಲ್ಲಿ ಹೊರಭಾಗದ ವರ್ಗದ ವಿಸ್ತೀರ್ಣ 25 ಚ. ಸೆಂ. ಮೀ. ಮತ್ತುಒಳಗಿನ ವರ್ಗದ ವಿಸ್ತೀರ್ಣ 9 ಚ. ಸೆಂ. ಮೀ. ಆದರೆ ಗೆರೆ ಎಳೆದ ಭಾಗದ ವಿಸ್ತೀರ್ಣ (ಸಾಧಾರಣ)

A) 20 ಚ. ಸೆಂ. ಮೀ. B) 26 ಚ. ಸೆಂ. ಮೀ. C) 10 ಚ. ಸೆಂ. ಮೀ. D) 16 ಚ. ಸೆಂ. ಮೀ.



15. ಕೊಟ್ಟಿರುವ ಆಯತದ ಸುತ್ತಳತೆ (ಸಾಧಾರಣ)

A) 14 ಮೀ B) 10 ಮೀ C) 8 ಮೀ D) 6 ಮೀ



<u>A ಪಟ್ಟಿಯಲ್ಲಿ ಸಮತಲಾಕೃತಿಗಳನ್ನು ಮತ್ತು B ಪಟ್ಟಿಯಲ್ಲಿ ಅವುಗಳಿಗೆ ಸಂಬಂಧಿಸಿದ ಸೂತ್ರಗಳನ್ನು ಕೊಟ್ಟಿದೆ. ಅವುಗಳನ್ನುಹೊಂದಿಸಿಬರೆಯಿರಿ.</u>

A	B	
16. ಆಯತದಸುತ್ತಳತೆ	ಉದ್ದ×ಅಗಲ	(ಸುಲಭ)
17. ಚೌಕದಸುತ್ತಳತೆ	ಬಾಹು×ಬಾಹು	(ಸುಲಭ)
18. ಆಯತದವಿಸ್ತೀರ್ಣ	2(ಉದ್ದ+ಅಗಲ)	(ಸುಲಭ)
19. ಚೌಕದವಿಸ್ತೀರ್ಣ	4 ×ಬಾಹು	(ಸುಲಭ)

<u>ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. (ಒಂದುಅಂಕದಪ್ರಶ್ನೆಗಳು)</u>

20. ಎರಡು ಆಯಾಮಗಳನ್ನು ಹೊಂದಿರುವ ಆಕೃತಿಗಳನ್ನು ಏನೆಂದು ಕರೆಯುತ್ತಾರೆ? (ಸುಲಭ)

21. ಆಯತದಲ್ಲಿರುವ ಎರಡು ಆಯಾಮಗಳನ್ನು ಹೆಸರಿಸಿ .(ಸುಲಭ)

22. ಆಯತದ ಸುತ್ತಳತೆಯು ಅದರ ಉದ್ದ ಮತ್ತುಅಗಲಗಳ ಮೊತ್ತದ ಎಷ್ಟರಷ್ಟಿವೆ? (ಸುಲಭ)


23. ಚೌಕದ ಎರಡು ಆಯಾಮಗಳನ್ನು ಹೆಸರಿಸಿ. (ಸುಲಭ)

24. ಚದರ ಏಕಮಾನ ಎಂದರೇನು? (ಸಾಧಾರಣ)

25. ವಿಸ್ತೀರ್ಣದ ಆದರ್ಶಮಾನ ಯಾವುದು ? (ಸುಲಭ)

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. (ಎರಡು ಅಂಕದ ಪ್ರಶ್ನೆಗಳು)

26. ಆಯತಾಕಾರದ ಹೊಲದ ಉದ್ದವು 150 ಮೀ. ಮತ್ತುಅಗಲವು 120 ಮೀ. ಹಾಗಾದರೆ ಹೊಲದ ಸುತ್ತಳತೆ ಎಷ್ಟು? (ಸಾಧಾರಣ)
27. ಒಂದು ಚೌಕಾಕಾರದ ಮೈದಾನದ ಉದ್ದ 80 ಮೀ. ಅದರ ಸುತ್ತಳತೆ ಎಷ್ಟು? (ಸುಲಭ)
28. ಕೊಟ್ಟಿರುವ ರೇಖಾಚಿತ್ರದ ಸುತ್ತಳತೆ ಮತ್ತು ವಿಸ್ತೀರ್ಣ ಕಂಡುಹಿಡಿಯಿರಿ .(ಸುಲಭ)



29. ಒಂದು ಕೊಠಡಿಯ ನೆಲಕ್ಕೆ ಪೂರ್ಣವಾಗಿ ಅಲಂಕಾರಿಕ ಕಾರ್ಪೆಟನ್ನು ಹಾಕಬೇಕಿದೆ. ಕೊಠಡಿಯ ಉದ್ದ 16 ಮೀ. ಮತ್ತುಅಗಲ 5 ಮೀ. ಆದರೆ ಹಾಸಲು ಅಗತ್ಯವಿರುವ ಕಾರ್ಪೆಟನ ವಿಸ್ತೀರ್ಣವನ್ನು ಕಂಡುಹಿಡಿಯಿರಿ . (ಸಾಧಾರಣ)
30. ಒಂದು ವರ್ಗಾಕಾರ ಹಾಳೆಯ ಉದ್ದ 21 ಸೆಂ. ಮೀ. ಇದೆ. ಅದರ ವಿಸ್ತೀರ್ಣವೆಷ್ಟು? (ಸುಲಭ)
31. ಚೌಕಾಕಾರವಿರುವ ಒಂದು ಕ್ಯಾನ್ವಾಸ್ ಬಟ್ಟೆಯ ಉದ್ದ 15 ಮೀ. ಇದೆ. ಅದರ ವಿಸ್ತೀರ್ಣವೆಷ್ಟು? (ಸುಲಭ)

<u>**ಮೂರು ಅಂಕದ ಪ್ರಶ್ನೆಗಳು**</u>

32. ಆಯತಾಕಾರದ ತೋಟದ ಉದ್ದವು 80 ಮೀ. ಮತ್ತುಅಗಲವು 50 ಮೀ. ಆದರೆ ತೋಟದ ಸುತ್ತಳತೆ ಎಷ್ಟು? ಈ ತೋಟದ ಸುತ್ತ ಮುಳ್ಳಿನ ತಂತಿ ಬೇಲಿಯನ್ನು 5 ಸುತ್ತು ಹಾಕಲು ಬೇಕಾಗುವ ಮುಳ್ಳಿನ ತಂತಿಯ ಉದ್ದವೆಷ್ಟು? (ಸಾಧಾರಣ)
33. ಶ್ರೀಲತಾಳು ಬೆಳಗಿನ ವಾಯು ಸಂಚಾರಕ್ಕೆ ಹೋದಾಗ, ಆಯತಾಕಾರದ ಪಾರ್ಕಿನ ಅಂಚಿನ ಸುತ್ತ 3 ಸುತ್ತು ನಡೆದಳು. ಆ ಪಾರ್ಕಿನ ಉದ್ದ 320 ಮೀ. ಮತ್ತುಅಗಲ 210 ಮೀ. ಆದರೆ ಅವಳು ನಡೆದ ಒಟ್ಟು ದೂರವೆಷ್ಟು? (ಸಾಧಾರಣ)
34. ಒಂದು ಚೌಕಾಕಾರದ ಕೊಠಡಿಯ ಉದ್ದ 16 ಮೀ. ಇದೆ. ಈ ಕೊಠಡಿಯ ಗೋಡೆಯ ಸುತ್ತ 4 ಸುತ್ತು ಬಣ್ಣದ ಬಟ್ಟೆಯ ತೋರಣವನ್ನು ಕಟ್ಟಬೇಕಿದೆ. ಇದಕ್ಕೆ ಬೇಕಾದ ತೋರಣದ ಉದ್ದವೆಷ್ಟು? (ಕಠಿಣ)
35. ಒಂದು ಚೌಕಾಕಾರದ ಮೈದಾನದ ಉದ್ದ 75 ಮೀ. ರೀಟಾಳು ಈ ಮೈದಾನದ ಸುತ್ತ 5 ಸುತ್ತುಓಡುತ್ತಾಳೆ. ಅವಳು ಓಡಿದ ಒಟ್ಟು ದೂರವೆಷ್ಟು? (ಕಠಿಣ)
36. ಆಯತಾಕಾರದ ಒಂದು ನಿವೇಶನವು 25 ಮೀ. ಉದ್ದ ಮತ್ತು 15 ಮೀ. ಅಗಲವಿದೆ. ಇದರ ವಿಸ್ತೀರ್ಣವನ್ನು ಕಂಡು ಹಿಡಿಯಿರಿ. ಒಂದು ಚ. ಮೀ. ಗೆ ₹ 250 ರ ದರದಂತೆ ನಿವೇಶನದ ಒಟ್ಟು ಬೆಲೆ ಎಷ್ಟು? (ಕಠಿಣ)

ನಾಲ್ಕು ಅಂಕದ ಪ್ರಶ್ನೆಗಳು

37. ಚೌಕಾಕಾರ ಕೊಠಡಿಯ ಉದ್ದ 400 ಸೆಂ. ಮೀ. ಇದೆ. ಈ ಕೊಠಡಿಯ ನೆಲಕ್ಕೆ 10 ಸೆಂ. ಮೀ. ಉದ್ದವಿರುವ ಚೌಕಾಕಾರದ ಟೈಲ್ಸ್ ಗಳನ್ನು ಹಾಕಬೇಕಾದರೆ ಎಷ್ಟುಟೈಲ್ಸ್ಗಳು ಬೇಕು? (ಕಠಿಣ)
38. 80 ಮೀ. ಉದ್ದ ಮತ್ತು 30 ಮೀ. ಅಗಲವಿರುವ ಆಯತಾಕಾರದ ಸಭಾಂಗಣದ ಗೋಡೆಯ ಸುತ್ತ 4 ಸುತ್ತು ಬಣ್ಣದ ಕಾಗದದ ತೋರಣವನ್ನು ಕಟ್ಟಬೇಕಿದೆ. ಇದಕ್ಕೆ ಬೇಕಾದ ತೋರಣದ ಉದ್ದವೆಷ್ಟು? ಒಂದು ಮೀಟರ್ ತೋರಣಕ್ಕೆ ₹ 15 ಆದರೆ ಸಭಾಂಗಣವನ್ನು ತೋರಣದಿಂದ ಶೃಂಗಾರ ಮಾಡಲು ತಗಲುವ ವೆಚ್ಚವೆಷ್ಟು? (ಕಠಿಣ)
39. ಆಯತಾಕಾರದ ಒಂದು ಸಭಾಂಗಣದ ಉದ್ದ 25 ಮೀ. , ಅಗಲ 18 ಮೀ. ಈ ಸಭಾಂಗಣದ ನೆಲಕ್ಕೆ 3 ಮೀ.× 1 ಮೀ. ಅಳತೆಯ ಹಾಸುಗಲ್ಲನ್ನು ಹಾಕಲು ಬೇಕಾಗುವ ಹಾಸುಗಲ್ಲುಗಳೆಷ್ಟು? (ಕಠಿಣ)
40. ವರ್ಗಾಕಾರದ ಕೊಠಡಿಯ ಉದ್ದ 8 ಮೀ. ಇದೆ. ಈ ಕೊಠಡಿಯ ನೆಲಕ್ಕೆ 2 ಮೀ×1 ಮೀ. ಅಳತೆಯ ಗ್ರಾನೈಟ್ ಕಲ್ಲುಗಳನ್ನು ಹಾಕಲು ಬೇಕಾಗುವ ಗ್ರಾನೈಟ್ ಕಲ್ಲುಗಳೆಷ್ಟು? (ಕಠಿಣ)

ಅಧ್ಯಾಯ 10 : ಅಂಕಿ ಅಂಶಗಳು

ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರವನ್ನು ನೀಡಲಾಗಿದ್ದು ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1) ಅಂಕಿ-ಅಂಶಗಳಿಗೆ ಸಂಬಂಧಿಸಿದಂತೆ ಕೆಳಗಿನವುಗಳಲ್ಲಿ ಸರಿಯಾದ ಕ್ರಮ. (ಸಾಧಾರಣ)
A) ಮಾಹಿತಿಸಂಗ್ರಹಣೆ, ಕೋಷ್ಟಕರೂಪ, ವಿಂಗಡಣೆ, ವಿಶ್ಲೇಷಣೆ
B) ಮಾಹಿತಿಸಂಗ್ರಹಣೆ, ವಿಂಗಡಣೆ, ವಿಶ್ಲೇಷಣೆ, ಕೋಷ್ಟಕರೂಪ
C) ಮಾಹಿತಿಸಂಗ್ರಹಣೆ, ವಿಂಗಡಣೆ, ಕೋಷ್ಟಕರೂಪ, ವಿಶ್ಲೇಷಣೆ
D) ಮಾಹಿತಿಸಂಗ್ರಹಣೆ, ವಿಶ್ಲೇಷಣೆ, ವಿಂಗಡಣೆ, ಕೋಷ್ಟಕರೂಪ,

2) ಸಂಗ್ರಹಿಸಿದ ಮಾಹಿತಿಯನ್ನು ಚಿತ್ರಗಳ ರೂಪದಲ್ಲಿ ಪ್ರತಿನಿಧಿಸುವುದನ್ನು ಹೀಗೆನ್ನುವರು. (ಸಾಧಾರಣ)
A) ಚಿತ್ರ B) ನಕ್ಷೆ C) ಚಿತ್ರನಕ್ಷೆ D) ಚೌಕನಕ್ಷೆ

3) ದತ್ತಾಂಶಗಳನ್ನು ಅಡ್ಡವಾಗಿ ಅಥವಾ ನೇರವಾಗಿ ಸಮಾನ ಅಂತರದ ಮತ್ತು ಒಂದೇ ಅಗಲದ ಸ್ತಂಭಗಳಲ್ಲಿ ಪ್ರತಿನಿಧಿಸಿದ ನಕ್ಷೆಯನ್ನು ಹೀಗೆನ್ನುವರು (ಸಾಧಾರಣ)
A) ಕಚ್ಚಾನಕ್ಷೆ B) ಸ್ತಂಭನಕ್ಷೆ C) ಚಿತ್ರನಕ್ಷೆ D) ಚೌಕನಕ್ಷೆ

4) 卌 ಈ ತಾಳೆಗೆರೆಗಳು ಸೂಚಿಸುವ ಸಂಖ್ಯೆ (ಸುಲಭ)
A) 5 B) 7 C) 6 D) 4

ಪ್ರಶ್ನೆಗಳಿಗೆ ಈ ಕೆಳಗಿನ ಚಿತ್ರನಕ್ಷೆ ಸಹಾಯದಿಂದ ಉತ್ತರಿಸಿ
35 ವಿದ್ಯಾರ್ಥಿಗಳು ಇರುವ ತರಗತಿಯಲ್ಲಿ ಒಂದು ವಾರದಲ್ಲಿ ಪ್ರತಿದಿನ ಹಾಜರಾಗಿರುವ ನಕ್ಷೆಯಲ್ಲಿ ನೀಡಲಾಗಿದೆ.

ದಿನಗಳು	= 5 ವಿದ್ಯಾರ್ಥಿಗಳು	ಹಾಜರಾದವಿದ್ಯಾರ್ಥಿಗಳು
ಸೋಮವಾರ		30
ಮಂಗಳವಾರ		25
ಬುಧವಾರ		15
ಗುರುವಾರ		35
ಶುಕ್ರವಾರ		20
ಶನಿವಾರ		10

5) ಅತ್ಯಂತ ಹೆಚ್ಚು ವಿದ್ಯಾರ್ಥಿಗಳು ಹಾಜರಾದ ದಿನ (ಸುಲಭ)
A) ಸೋಮವಾರ B) ಮಂಗಳವಾರ C) ಗುರುವಾರ D) ಶನಿವಾರ

6) ಅತ್ಯಂತ ಕಡಿಮೆ ವಿದ್ಯಾರ್ಥಿಗಳು ಹಾಜರಾದ ದಿನ (ಸುಲಭ)
A) ಬುಧವಾರ B) ಶನಿವಾರ C) ಶುಕ್ರವಾರ D) ಮಂಗಳವಾರ

7) ಸೋಮವಾರ ಹಾಜರಾದ ಒಟ್ಟೂ ವಿದ್ಯಾರ್ಥಿಗಳ ಸಂಖ್ಯೆ. (ಸುಲಭ)
A) 25 B) 10 C) 35 D) 30


8) ಎಲ್ಲ ವಿದ್ಯಾರ್ಥಿಗಳು ಹಾಜರಾದ ದಿನ (ಸುಲಭ)
A) ಸೋಮವಾರ B) ಶನಿವಾರ C) ಗುರುವಾರ D) ಮಂಗಳವಾರ

9) ಮಂಗಳವಾರ ಮತ್ತು ಶುಕ್ರವಾರ ಹಾಜರಾಗಿರುವ ವಿದ್ಯಾರ್ಥಿಗಳ ಸಂಖ್ಯೆಯಲ್ಲಿನ ವ್ಯತ್ಯಾಸ (ಸುಲಭ)
A) 10 B) 5 C) 15 D) 20

10) ಬುಧವಾರ ಗೈರು ಹಾಜರಾಗಿದ್ದ ವಿದ್ಯಾರ್ಥಿಗಳ ಸಂಖ್ಯೆ (ಸುಲಭ)
A) 30 B) 20 C) 25 D) 15

ಪ್ರಶ್ನೆಗಳಿಗೆ ಈ ಕೆಳಗಿನ ಸ್ತಂಭನಕ್ಷೆ ಸಹಾಯದಿಂದ ಉತ್ತರಿಸಿ

1 ರಿಂದ 5ನೇ ತರಗತಿಯವರೆಗೆ ಸ್ತಂಭ ನಕ್ಷೆಯಲ್ಲಿ ತೋರಿಸಿರುವಂತೆ ಮಕ್ಕಳ ಹಾಜರಾತಿ ಇದೆ.ಇದನ್ನು ಗಮನಿಸಿ ಮುಂದಿನಪ್ರಶ್ನೆಗಳಿಗೆಉತ್ತರಿಸಿ



11) ಹೆಚ್ಚು ಹಾಜರಾತಿ ಇರುವ ತರಗತಿ (ಸುಲಭ)
A) 1ನೇತರಗತಿ B) 3ನೇತರಗತಿ C) 2ನೇತರಗತಿ D) 4ನೇತರಗತಿ



12) ಕಡಿಮೆ ಹಾಜರಾತಿ ಇರುವ ತರಗತಿ (ಸುಲಭ)
A) 2ನೇತರಗತಿ B) 1ನೇತರಗತಿ C) 2ನೇತರಗತಿ D) 3ನೇತರಗತಿ

13) 1, 2 ಮತ್ತು 3ನೇ ತರಗತಿಗಳ ಒಟ್ಟೂ ಹಾಜರಾತಿ (ಸುಲಭ)
A) 55 B) 65 C) 75 D) 85



14) ನಾಲ್ಕನೇ ತರಗತಿಯಲ್ಲಿ ಒಂದನೇ ತರಗತಿಗಿಂತಲೂ ಎಷ್ಟು ಹಾಜರಾತಿ ಹೆಚ್ಚು ಇದೆ. (ಸಾಧಾರಣ)
A) 15 B) 25 C) 20 D) 35

15) ರವಿಯ ಬಳಿ 10 ಚೆಂಡುಗಳಿವೆ, ರಾಜುವಿನ ಬಳಿ 5 ಚೆಂಡುಗಳಿವೆ. ಈ ದತ್ತಾಂಶಗಳನ್ನು ಪ್ರತಿನಿಧಿಸುವ ಸರಿಯಾದ ಚಿತ್ರನಕ್ಷೆ (ಸಾಧಾರಣ)
(ಸ್ಕೇಲ್: =5 ಚೆಂಡುಗಳು)


A)

ರವಿ	
ರಾಜು	



B)

ರವಿ	
ರಾಜು	

C)

ರವಿ	
ರಾಜು	

D)

ರವಿ	
ರಾಜು	

16) ಹೊಂದಿಸಿಬರೆಯಿರಿ ಸುಲಭ)

	ಒಟ್ಟುಸಂಖ್ಯೆ	ತಾಳೆ
	7	𝍸
	10	𝍸 |||
	4	𝍸 ||
	2					
	5	𝍸 𝍸
	8			

2 ಅಂಕದ ಪ್ರಶ್ನೆಗಳು

17) ಚಿತ್ರ ನಕ್ಷೆ ಎಂದರೇನು? (ಸಾಧಾರಣ)

18) ಸ್ತಂಭ ನಕ್ಷೆ ಎಂದರೇನು?
(ಸಾಧಾರಣ)

19) 5ನೇ ತರಗತಿ ವಿದ್ಯಾರ್ಥಿಗಳಿಗೆ ಇಷ್ಟವಾದ ಹಣ್ಣನ್ನು ತಿಳಿಯಲು ಸಮೀಕ್ಷೆ ನಡೆಸಲಾಯಿತು. 10 ವಿದ್ಯಾರ್ಥಿಗಳು ಸೇಬು, 7 ವಿದ್ಯಾರ್ಥಿಗಳು ಬಾಳೆಹಣ್ಣು, 3 ವಿದ್ಯಾರ್ಥಿಗಳು ಕಿತ್ತಳೆಹಣ್ಣು ಹಾಗೂ 8 ವಿದ್ಯಾರ್ಥಿಗಳು ದಾಳಿಂಬೆಹಣ್ಣು ಎಂದು ತಿಳಿಸಿದರು.ಈ ದತ್ತಾಂಶವನ್ನು ಕೋಷ್ಟಕದ ರೂಪದಲ್ಲಿ ಬರೆಯಿರಿ (ಸಾಧಾರಣ)

ಹಣ್ಣುಗಳಹೆಸರು	**ತಾಳೆ**	**ಹಣ್ಣುಗಳಇಷ್ಟಪಡುವವಿದ್ಯಾರ್ಥಿಗಳಸಂಖ್ಯೆ**
ಸೇಬು		
ಬಾಳೆಹಣ್ಣು		
ಕಿತ್ತಳೆಹಣ್ಣು		
ದಾಳಿಂಬೆ		


20) ಒಂದು ಕಾರ್ಖಾನೆಯಲ್ಲಿ ಉತ್ಪಾದನೆ ಮಾಡಿದ ವಿದ್ಯುತ್ ದೀಪಗಳ ಸಂಖ್ಯೆಗಳನ್ನು ಕೆಳಗೆ ಕೊಡಲಾಗಿದೆ.

ಈ ದತ್ತಾಂಶಗಳಿಗೆ ಚಿತ್ರನಕ್ಷೆ ರಚಿಸಿ ನಿಮ್ಮದೇ ಸ್ಕೇಲ್ ಪ್ರಮಾಣ ತೆಗೆದುಕೊಳ್ಳಿ (ಕಠಿಣ)

ವಾರದದಿನಗಳು	ಸೋಮ	ಮಂಗಳ	ಬುಧ	ಗುರು	ಶುಕ್ರ	ಶನಿ
ತಯಾರಿಸಿದವಿದ್ಯುತ್ ದೀಪಗಳು	50	40	60	20	30	40

3 ಅಂಕದ ಪ್ರಶ್ನೆಗಳು

21) ಕೆಳಗಿನ ಸ್ತಂಭನಕ್ಷೆ ಗಮನಿಸಿ ಪ್ರಶ್ನೆಗಳಿಗೆ ಉತ್ತರಿಸಿ (ಕಠಿಣ)



1) ಸ್ತಂಭ ನಕ್ಷೆಯಲ್ಲಿ ನೀಡಿದ ವಿವರಗಳು ಯಾವುವು?
2) ಈ ನಕ್ಷೆ ರಚಿಸಲು ಉಪಯೋಗಿಸಿದ ಪ್ರಮಾಣ ಎಷ್ಟು?
3) ಪ್ರತಿ ದಿನ ಗಳಿಸಿದ ಹಣವನ್ನು ತಿಳಿಸಿ

ಒಂದನೇದಿನ ☐ ನಾಲ್ಕನೇದಿನ ☐

ಎರಡನೇದಿನ ☐ ಐದನೇದಿನ ☐

ಮೂರನೇದಿನ ☐

4) ಒಟ್ಟು ಐದು ದಿನಗಳಲ್ಲಿ ವ್ಯಾಪಾರದಿಂದ ಗಳಿಸಿದ ಹಣ ಎಷ್ಟು?
5) ಎರಡನೇ ದಿನ ಮತ್ತು ಐದನೇ ದಿನದಂದು ವ್ಯಾಪಾರ ಮಾಡಿದ ಹಣದ ವ್ಯತ್ಯಾಸ ಎಷ್ಟು?
6) ಪ್ರತಿಯೊಂದು ದಿನದ ವ್ಯಾಪಾರದ ಇಳಿಕೆ ಕ್ರಮದಲ್ಲಿ ಬರೆಯಿರಿ

22) ಒಂದು ವಾರದ 6 ದಿನಗಳಲ್ಲಿಒಬ್ಬಅಂಗಡಿಯವನು ಕೆಲವು ಬೆಲ್ಟ್ (ಸೊಂಟದ ಪಟ್ಟಿ) ಗಳನ್ನು ಮಾರುವವನು ಇದರ ವಿವರ ಕೆಳಗಿನಂತಿವೆ (ಕಠಿಣ)

ದಿವಸಗಳು	ಸೋಮ	ಮಂಗಳ	ಬುಧ	ಗುರು	ಶುಕ್ರ	ಶನಿ
ಮಾರಾಟಮಾಡಿದಬೆಲ್ಟ್‌ಗಳು	20	30	45	35	25	20

ಈ ದತ್ತಾಂಶಗಳಿಗೆ ಸ್ತಂಭ ನಕ್ಷೆ ರಚಿಸಿ
ಸ್ಕೇಲ್ : 1 ಸೆ.ಮೀ. = 5 ಬೆಲ್ಟ್‌ಗಳು

1) 6 ದಿನಗಳಲ್ಲಿ ಮಾರಿದ ಒಟ್ಟೂ ಬೆಲ್ಟ್‌ಗಳ ಸಂಖ್ಯೆ ಎಷ್ಟು?

4 ಅಂಕದಪ್ರಶ್ನೆಗಳು

23) ರಾಮುವಿನ ಕೈ ಚೀಲದಲ್ಲಿ 5 ಪೆನ್‌ಗಳು, 3 ರಬ್ಬರ್‌ಗಳು, 6 ಪುಸ್ತಕಗಳು, 2 ಪೆನ್ಸಿಲ್‌ಗಳು ಮತ್ತುಒಂದು ಶಾರ್ಪನರ್ (ಪೆನ್ಸಿಲ್ ಹರಿತ ಮಾಡಲು ಉಪಯೋಗಿಸುವುದು) ಗಳಿವೆ ಈ ದತ್ತಾಂಶಗಳನ್ನು ಕೋಷ್ಟಕದ ರೂಪದಲ್ಲಿ ಬರೆದು ಚಿತ್ರನಕ್ಷೆ ರಚಿಸಿ (ಕಠಿಣ)

ವಸ್ತುಗಳಹೆಸರು	ವಸ್ತುಗಳಸಂಖ್ಯೆ

ವಸ್ತುಗಳಹೆಸರು	ಚಿತ್ರನಕ್ಷೆ

24) ಒಂದು ಬೈಸಿಕಲ್ ಕಾರ್ಖಾನೆಯಲ್ಲಿ 2005 ರಿಂದ 2009ನೇ ವರ್ಷದಲ್ಲಿ ತಯಾರಿಸಲಾದ ಬೈಸಿಕಲ್‌ಗಳ ಸಂಖ್ಯೆಯನ್ನು ಕೆಳಗಿನಪಟ್ಟಿಯಲ್ಲಿ ಕೊಡಲಾಗಿದೆ. ಸೂಕ್ತವಾದ ಪ್ರಮಾಣವನ್ನು ಬಳಸಿ ಸ್ತಂಭನಕ್ಷೆಯನ್ನು ರಚಿಸಿ (ಕಠಿಣ)

ವರ್ಷ	ತಯಾರಿಸಿದಬೈಸಿಕಲ್‌ಗಳಸಂಖ್ಯೆ
2005	800
2006	600
2007	900
2008	500
2009	700

ಅ) ಯಾವ ವರ್ಷದಲ್ಲಿಅತಿ ಹೆಚ್ಚು ಬೈಸಿಕಲ್‌ಗಳನ್ನು ತಯಾರಿಸಲಾಯಿತು?

ಆ) ಯಾವ ವರ್ಷದಲ್ಲಿ ಕಡಿಮೆ ಬೈಸಿಕಲ್‌ಗಳನ್ನು ತಯಾರಿಸಲಾಯಿತು?

25) ಸ್ತಂಭ ನಕ್ಷೆ ರಚಿಸುವಾಗ ಅನುಸರಿಸುವ ಹಂತಗಳನ್ನು ಬರೆಯಿರಿ? (ಕಠಿಣ)

ಅಧ್ಯಾಯ 11 : ಗುಣಾಕಾರ

1 ಅಂಕದಪ್ರಶ್ನೆಗಳು

1) ಒಂದು ಸಂಖ್ಯೆಯನ್ನು ಇನ್ನೊಂದು ಸಂಖ್ಯೆಯೊಂದಿಗೆ ಗುಣಿಸಿದಾಗ ಸಿಗುವ ಮೊತ್ತವು ಅದರ (ಸುಲಭ)

A] ಭಾಗಲಬ್ಧ B] ಸಂಕಲನ C] ಗುಣಲಬ್ಧ D] ವ್ಯತ್ಯಾಸ

2) 4 x 4 x 4 x 4 x 4 x 4 ಎಂದರೆ ಕೆಳಗಿನವುಗಳಲ್ಲಿ ಯಾವ ಉತ್ತರ ಸರಿಯಾಗಿದೆ ? (ಸುಲಭ)

A] 4 x 6 ಗುಣಿಸುವುದು

B] 4 x 6 x 4 ಗುಣಿಸುವುದು

C] 4 ಅನ್ನು 6 ಬಾರಿಗುಣಿಸುವುದು

D] 46 ಅನ್ನು 1 ರಿಂದಗುಣಿಸುವುದು

3) ಯಾವ ಜೋಡಿಯು ಸರಿಯಾಗಿ ಹೊಂದಾಣಿಕೆಯಾಗುತ್ತದೆ . (ಸುಲಭ)

__________ X 100 = ____________

A) 300 & 3000 B) 30 & 30000 C) 30 & 3000 D) 30 & 300

4) 30 x 700 ಇದರ ಮೊತ್ತ ಕಂಡುಹಿಡಿಯಲು ರಾಮನು ಮೊದಲು 3 x 7 = 21 ಎಂದುಬರೆದರೆಎಷ್ಟು ಸೊನ್ನೆಗಳನ್ನು ಸೇರಿಸಬೇಕು. (ಸುಲಭ)

A) 3 B) 2 C) 4 D) 1

5) ರವಿಯು ಒಂದು ಮನೆಗೆ ಬಣ್ಣಹಚ್ಚಲು ಒಂದು ಗಂಟೆಗೆ ರೂ. 12 ತೆಗೆದುಕೊಳ್ಳುತ್ತಾನೆ. ಹಾಗಾದರೆ ಅವನು 214 ಗಂಟೆ ಕೆಲಸ ಮಾಡಿದರೆ ರವಿಯ ಒಟ್ಟು ಸಂಪಾದನೆಯು (ಸಾಧಾರಣ)

A) ರೂ. 258 B) ರೂ. 428 C) ರೂ. 2568 D) ರೂ. 4288

6) ಸಿಯಾ ತನ್ನ ಡಿಜಿಟಲ್ ಕ್ಯಾಮರಾದಿಂದ 42 ಫೋಟೋಗಳನ್ನು ತೆಗೆಯುತ್ತಾಳೆ. ನಂತರ ಅದನ್ನು ಗಣಕ ಯಂತ್ರದಲ್ಲಿ 3 ಫೋಲ್ಡರ್‌ಗಳಲ್ಲಿ ಸಮಾನವಾಗಿ ಸೇರಿಸುತ್ತಾಳೆ. ಈ ಕೆಳಗಿನ ಯಾವ ಗುಣಲಬ್ಧದಿಂದ ಸಿಯಾಳು ಪ್ರತಿ ಫೋಲ್ಡರ್‌ಗಳಲ್ಲಿ ಎಷ್ಟು ಫೋಟೋಗಳನ್ನು ಸೇರಿಸಿದ್ದಾಳೆ ಎನ್ನುವುದನ್ನುಕಾಣಬಹುದು. (ಸಾಧಾರಣ)

A) 3 x 14 = 42 B) 3 x 40 = 120 C) 3 x 42 = 126 D) 4 x 42 = 168

7) 13 x _____ = 117. ಈ ಕೆಳಗಿನವುಗಳಲ್ಲಿ ಯಾವ ಉತ್ತರ ಸರಿ ಇದೆ. (ಸುಲಭ)

A) 9 B) 13 C) 19 D) 22

8) ಒಂದು ಸೋಡಾ ಬಾಟಲಿಯು 7 ಸಣ್ಣಕ್ಯಾನಿನಲ್ಲಿರುವಷ್ಟು ಸೋಡಾಗೆ ಸಮವಾಗಿರುತ್ತದೆ ಹಾಗೂ ಪ್ರತಿ ಕ್ಯಾನಿನಲ್ಲಿ 8 ಲೀಟರ್ ಸೋಡಾ ಇದ್ದರೆ ಬಾಟಲಿಯಲ್ಲಿ ಒಟ್ಟು ಎಷ್ಟು ಲೀಟರ್ ಸೋಡಾ ಇರುತ್ತದೆ . (ಸಾಧಾರಣ)

A) 65 ಲೀಟರ್ B) 1 ಲೀಟರ್ C) 56 ಲೀಟರ್ D) 15 ಲೀಟರ್

9) ಸೀತಾ, ಸೀತಾಳ ಗಂಡ ಹಾಗೂ 3 ಮಕ್ಕಳು ಅಮೇರಿಕಾಗೆ ಪ್ರಯಾಣಿಸುತ್ತಿದ್ದಾರೆ. ವಿಮಾನದ ಒಂದು ಟಿಕೆಟ್‌ನ ಬೆಲೆ ರೂ. 179 ಆದರೆ, ಕುಟುಂಬದ ಎಲ್ಲಾ ಸದಸ್ಯರ ಟಿಕೆಟ್‌ಗಳ ಒಟ್ಟೂ ಬೆಲೆ ಎಷ್ಟು ?

(ಸಾಧಾರಣ)

A) 395 B) 895 C) 589 D) 935

10) (4 x 5) x 3= (ಸುಲಭ)

A) 40 B) 90 C) 80 D) 60

11) 5 35 = X (ಸುಲಭ)

A) X = 185 B) X = 165 C) X = 175 D) 195

12) ನರೇಂದ್ರನು ಒಂದು ಗಂಟೆ ವ್ಯಾಮಾಯದಿಂದ 354 ಕ್ಯಾಲೋರಿಗಳನ್ನು ಕಳೆದುಕೊಳ್ಳುತ್ತಾನೆ. ಅವನು ಕಳೆದ ಒಂದು ತಿಂಗಳಿನಿಂದ ಒಟ್ಟೂ 28 ಗಂಟೆಗಳ ಕಾಲ ವ್ಯಾಯಾಮ ಮಾಡಿರುತ್ತಾನೆ. ಇದರಿಂದ ಅವನು ಕಳೆದುಕೊಂಡ ಕ್ಯಾಲೋರಿಗಳು (ಸಾಧಾರಣ)

A) 3010 ಕ್ಯಾಲೋರಿ B) 8484 ಕ್ಯಾಲೋರಿ C) 9912 ಕ್ಯಾಲೋರಿ D) 10266 ಕ್ಯಾಲೋರಿ

ಆ. 2 ಅಂಕದಪ್ರಶ್ನೆಗಳು

13) 156 x 137 ರಗುಣಲಬ್ದವನ್ನುಕಂಡುಹಿಡಿಯಿರಿ. (ಸುಲಭ)

14) 8261 x 8 ರಗುಣಲಬ್ದವನ್ನುಕಂಡುಹಿಡಿಯಿರಿ. (ಸುಲಭ)

15) 1908 x 37 ರಗುಣಲಬ್ದವನ್ನುಕಂಡುಹಿಡಿಯಿರಿ. (ಸುಲಭ)

16) 10093 x 3 ರಗುಣಲಬ್ದವನ್ನುಕಂಡುಹಿಡಿಯಿರಿ. (ಸುಲಭ)


17) 21497 x 3 ರಗುಣಲಬ್ದವನ್ನುಕಂಡುಹಿಡಿಯಿರಿ. (ಸುಲಭ)

18) 15746 x 5 ರಗುಣಲಬ್ದವನ್ನುಕಂಡುಹಿಡಿಯಿರಿ. (ಸುಲಭ)

19) 11048 x 7 ರಗುಣಲಬ್ದವನ್ನುಕಂಡುಹಿಡಿಯಿರಿ. (ಸಾಧಾರಣ)

20) 10039 x 9 ರಗುಣಲಬ್ದವನ್ನುಕಂಡುಹಿಡಿಯಿರಿ. (ಸಾಧಾರಣ)

21) ಗುಣಾಕಾರದವೃತ್ತವನ್ನುಪೂರ್ಣಗೊಳಿಸಿ :- (ಸಾಧಾರಣ)



ಇ. 4 ಅಂಕದಪ್ರಶ್ನೆಗಳು.

22) ಒಂದುಪೆಟ್ಟಿಗೆಯಲ್ಲಿ 276 ಸೇಬುಗಳಿದ್ದರೆ, 175 ಪೆಟ್ಟಿಗೆಗಳಲ್ಲಿ ಇರುವಸೇಬುಗಳುಎಷ್ಟು ? (ಕಠಿಣ)

23) ಒಂದುಕಾರ್ಖಾನೆಯಲ್ಲಿ ಒಂದುತಿಂಗಳಿನಲ್ಲಿ 5376 ಗೊಂಬೆಗಳನ್ನುತಯಾರಿಸಿದರೆ, ಆ ಕಾರ್ಖಾನೆಯಲ್ಲಿವಾರ್ಷಿಕವಾಗಿಒಟ್ಟೂಎಷ್ಟುಗೊಂಬೆಗಳನ್ನುಉತ್ಪಾದಿಸುತ್ತಾರೆ ? (ಕಠಿಣ)

24) ಒಂದುಶಾಲೆಯು 28 ಕೊಠಡಿಗಳನ್ನುಹೊಂದಿದೆ. ಪ್ರತಿಕೊಠಡಿಯಲ್ಲಿ 32 ವಿದ್ಯಾರ್ಥಿಗಳಿದ್ದಾರೆ. ಹಾಗಾದರೆಶಾಲೆಯಲ್ಲಿರುವಒಟ್ಟೂವಿದ್ಯಾರ್ಥಿಗಳಸಂಖ್ಯೆಎಷ್ಟು ? (ಕಠಿಣ)

25) ಸಿದ್ದಪ್ಪನುಕಿತ್ತಳೆಹಣ್ಣನ್ನುರಫ್ತುಮಾಡುವಹಣ್ಣಿನದಲ್ಲಾಳಿ. ಒಂದುಡಬ್ಬಿಯಲ್ಲಿ 144 ಕಿತ್ತಳೆ ಹಣ್ಣುಇರುತ್ತವೆ. ಅವನು 259 ಕಿತ್ತಳೆಹಣ್ಣಿನಡಬ್ಬಿಗಳನ್ನುರಫ್ತುಮಾಡುತ್ತಾನೆ. ಹಾಗಾದರೆಅವನು ರಫ್ತುಮಾಡುವಕಿತ್ತಳೆಹಣ್ಣುಗಳಸಂಖ್ಯೆಯನ್ನುಕಂಡುಹಿಡಿಯಿರಿ. (ಕಠಿಣ)

26) ಒಂದುರಕ್ಷಿತಅರಣ್ಯಪ್ರದೇಶದಲ್ಲಿ, 160 ಗಿಡಗಳನ್ನುಪ್ರತಿಅಡ್ಡಸಾಲಿನಲ್ಲಿಮತ್ತು 108 ಗಿಡಗಳನ್ನು ಪ್ರತಿಕಂಬಸಾಲಿನಲ್ಲಿ ಇರುವಂತೆನೆಡಲಾಗಿದೆ. ಒಟ್ಟುಗಿಡಗಳಸಂಖ್ಯೆಯನ್ನುಕಂಡುಹಿಡಿಯಿರಿ. (ಕಠಿಣ)

ಅಧ್ಯಾಯಸಂಖ್ಯೆ:12 ಭಾಗಾಕಾರ

1 ಅಂಕದ ಪ್ರಶ್ನೆಗಳು

I) ಬಿಟ್ಟ ಸ್ಥಳ ತುಂಬಿರಿ.

1. ವಸ್ತುಗಳನ್ನು ಸಮಾನವಾಗಿ ವರ್ಗೀಕರಿಸುವ ಅಥವಾ ವಿತರಿಸುವ ಪ್ರಕ್ರಿಯೆಯನ್ನು ________ ಎಂದು ಕಾರೆಯಲಾಗುತ್ತದೆ. (ಸುಲಭ)
2. ಗುಣಾಕಾರದ ವಿರುದ್ಧ ಕ್ರಿಯೆಯೇ______ (ಸುಲಭ)
3. ಭಾಜ್ಯ= (_____ ×______) + ಶೇಷ (ಸುಲಭ)
4. ಭಾಜಕ 4, ಭಾಗಲಬ್ಧ 11 ಮತ್ತುಶೇಷ 1 ನ್ನುಹೊಂದಿರುವಭಾಗಾಕಾರಕ್ರಿಯೆಯಲ್ಲಿಭಾಜ್ಯಎಷ್ಟು? (ಸುಲಭ)
5. 420÷10 =42, ಈ ಭಾಗಾಕಾರ ಕ್ರಿಯೆಯಲ್ಲಿ ಭಾಜ್ಯ ಸಂಖ್ಯೆ_______ (ಸುಲಭ)
6. 72 ÷ 6=12, ಈ ಭಾಗಾಕಾರ ಕ್ರಿಯೆಯಲ್ಲಿ ಭಾಜಕ ಸಂಖ್ಯೆ ______ (ಸುಲಭ)
7. 64÷ 4 =16,ಈ ಭಾಗಾಕಾರ ಕ್ರಿಯೆಯಲ್ಲಿ ಭಾಗಲಬ್ಧ ಸಂಖ್ಯೆ ______ (ಸುಲಭ)
8. 360÷9, ಮಾಡಿದಾಗ ಉಳಿಯುವ ಶೇಷ______ (ಸುಲಭ)

II) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

9. ಭಾಜ್ಯ ಎಂದರೇನು? (ಸುಲಭ)
10. ಭಾಜಕ ಎಂದರೇನು? (ಸುಲಭ)
11. ಭಾಗಲಬ್ಧ ಎಂದರೇನು? (ಸುಲಭ)
12. ಶೇಷ ಎಂದರೇನು? (ಸುಲಭ)
13. ಭಾಗಲಬ್ಧ 6, ಭಾಜಕ 7, ಶೇಷ 4 ಆದರೆ ಭಾಜ್ಯ ಸಂಖ್ಯೆ ಎಷ್ಟು? (ಸುಲಭ)
14. 32 ರಿಂದ ಪ್ರತಿಬಾರಿ 4 ರಂತೆ ಎಷ್ಟು ಸಾರಿ ಕಳೆಯಲು ಸಾಧ್ಯ? (ಸುಲಭ)

III) ಕೆಳಗಿನ ಸಮಸ್ಯೆಯನ್ನು ಬಿಡಿಸಿ. (2 ಅಂಕ)

15) 648÷12=? (ಸಾಧಾರಣ)

16) 56,083 ನ್ನು 11ರಿಂದ ಭಾಗಿಸಿರಿ .(ಸಾಧಾರಣ)

17) 32,493 ನ್ನು 2 ರಿಂದ ಭಾಗಿಸಿರಿ. (ಸಾಧಾರಣ)

18) 2,647 ನ್ನು13 ರಿಂದ ಭಾಗಿಸಿರಿ. (ಸಾಧಾರಣ)

19) 3647 ನ್ನು 9 ರಿಂದ ಭಾಗಿಸಿರಿ. (ಸಾಧಾರಣ)

IV) ಕೆಳಗಿನ ಸಮಸ್ಯೆಯನ್ನು ಬಿಡಿಸಿರಿ. (3 ಅಂಕ)

20)ರಮ್ಯಾಳ ಹತ್ತಿರ 32 ಚಾಕಲೇಟುಗಳಿವೆ.

ಅವುಗಳನ್ನು ಎಂಟು ಜನರಿಗೆ ಸಮನಾಗಿ ಹಂಚಿದರೆ ಪ್ರತಿಯೊಬ್ಬರಿಗೂ ದೊರೆಯುವ ಚಾಕಲೇಟು ಎಷ್ಟು?

(ಸಾಧಾರಣ)

21)17 ವಿದ್ಯಾರ್ಥಿಗಳ ಒಂದು ದಿನದ ಪ್ರವಾಸದ ಖರ್ಚು 7,242ರೂ. ಪ್ರತಿ ವಿದ್ಯಾರ್ಥಿಯು ಕೊಡಬೇಕಾದ ಹಣ ಕಂಡುಹಿಡಿ. (ಸಾಧಾರಣ)

22)ಅನಿತಾ 908 ಮಿಠಾಯಿಗಳನ್ನು ತನ್ನ 25 ಜನ ಗೆಳತಿಯರಿ ಗೆಹಂಚಿದಳು .ಪ್ರತಿಯೊಬ್ಬರಿಗೂ ದೊರೆತ ಮಿಠಾಯಿಎಷ್ಟು? ಹಂಚಿದ ನಂತರ ಅವಳಲ್ಲಿ ಉಳಿಯುವ ಮಿಠಾಯಿಗಳೆಷ್ಟು?

(ಸಾಧಾರಣ)

23)ಒಬ್ಬ ಟೈಲರನ ಹತ್ತಿರ 18 ಮೀಟರ್ ಅಂಗಿಯಬಟ್ಟೆಇದೆ. ಅವನು 9 ಅಂಗಿಗಳನ್ನು ಈ ಬಟ್ಟೆಯಿಂದ ಹೊಲಿಯಬಹುದು. ಹಾಗಾದರೆ ಒಂದು ಅಂಗಿಯನ್ನು ಹೊಲಿಯಲು ಎಷ್ಟು ಬಟ್ಟೆ ಬೇಕಾಗುತ್ತದೆ?

(ಸಾಧಾರಣ)

24)ಒಂದು ಕಾರು 15 ಲೀಟರ್ ಪೆಟ್ರೋಲಿನಲ್ಲಿ 240 ಕಿ.ಮೀ. ದೂರಕ್ರಮಿಸುತ್ತದೆ.
ಹಾಗಾದರೆ ಈ ಕಾರು ಪ್ರತಿ ಲೀಟರ್ಗೆ ಎಷ್ಟು ದೂರ ಕ್ರಮಿಸುತ್ತದೆ?

(ಸಾಧಾರಣ)

25)ಮಂಜುಳಾ 1,116ರೂ.ಗೆ 12 ಸಮಾನಬೆಲೆಯಆಟಿಕೆಸಾಮಾನುಗಳನ್ನುಕೊಂಡಳು.
ಪ್ರತಿ ಆಟಿಕೆಯ ಬೆಲೆಯನ್ನು ಕಂಡು ಹಿಡಿಯಿರಿ.

(ಸಾಧಾರಣ)

26)ಒಬ್ಬವ್ಯಕ್ತಿಯವಾರ್ಷಿಕಆದಾಯವು 90,912 ರೂ. ಅವನಒಂದುತಿಂಗಳಿನಆದಾಯವನ್ನುಕಂಡುಹಿಡಿಯಿರಿ.

(ಸಾಧಾರಣ)

27)ಒಂದು ಕಾರಿನ ಕಾರ್ಖಾನೆಯು 13 ತಿಂಗಳಿನಲ್ಲಿ 14,820 ಕಾರುಗಳನ್ನುಉತ್ಪಾದಿಸುತ್ತದೆ.
ಕಾರಿನ ಕಾರ್ಖಾನೆಯು ಒಂದು ತಿಂಗಳಿನಲ್ಲಿ ಉತ್ಪಾದಿಸುವ ಕಾರುಗಳ ಸಂಖ್ಯೆಯನ್ನು ಕಂಡುಹಿಡಿಯಿರಿ.

(ಕಠಿಣ)

V)ಕೆಳಗಿನ ಸಮಸ್ಯೆಗಳನ್ನುಬಿಡಿಸಿರಿ. (4ಅಂಕ)

28)ಒಂದು ಸಮಾಜ ಸೇವಾ ಸಂಘವು 175 ದಾನಿಗಳಿಂದ, ತಲಾ 125ರೂ.ನಂತೆ ಹಣ ಸಂಗ್ರಹಿಸಿತು. ಸಂಘವು ಈ ಹಣವನ್ನು 7 ಶಾಲೆಗಳಿಗೆ ಸಮನಾಗಿ ಹಂಚಿದರೆ, ಪ್ರತಿಶಾಲೆಗೆ ದೊರೆಯುವ ಹಣವನ್ನು ಕಂಡುಹಿಡಿಯಿರಿ

. (ಕಠಿಣ)

29)ಒಂದು ಹಳ್ಳಿಯ ಹತ್ತಿರದ ಸರ್ಕಾರಿ ಜಮೀನಿನಲ್ಲಿ ಅರಣ್ಯ ಇಲಾಖೆಯ ಪ್ರತಿ ಅಡ್ಡ ಸಾಲಿನಲ್ಲಿ 96 ಗಿಡಗಳನ್ನು ಮತ್ತು ಕಂಬಸಾಲಿನಲ್ಲಿ 80 ಗಿಡಗಳನ್ನು ನೆಡುತ್ತದೆ. ಹಳ್ಳಿಯ 12
ಜನರು ಈ ಗಿಡಗಳನ್ನು ದತ್ತು ತೆಗೆದುಕೊಳ್ಳಲು ಒಪ್ಪಿದರೆ, ಪ್ರತಿಯೊಬ್ಬರಿಗೂ ಎಷ್ಟು ಗಿಡಗಳು ಬರುತ್ತವೆ (ಕಠಿಣ)

30)ಕಿತ್ತಳೆಯ ತೋಟದಲ್ಲಿ 82 ಕಿತ್ತಳೆಯ ಗಿಡಗಳಿವೆ. ಒಬ್ಬ ರೈತನು ಪ್ರತಿಯೊಂದು ಗಿಡದಿಂದ 60 ಕಿತ್ತಳೆಯ ಹಣ್ಣುಗಳನ್ನು ಕೀಳುತ್ತಾನೆ. ಅವುಗಳನ್ನು ಪ್ರತಿ ಪೆಟ್ಟಿಗೆಯಲ್ಲಿ 12 ಹಣ್ಣುಗಳಂತೆ ತುಂಬಿದರೆ, ಆ ಎಲ್ಲಾ ಹಣ್ಣುಗಳನ್ನು ತುಂಬಲು ಎಷ್ಟು ಪೆಟ್ಟಿಗೆಗಳು ಬೇಕಾಗುತ್ತವೆ? (ಕಠಿಣ)

31)ಒಂದು ಶಾಲೆಯ 15 ವಿದ್ಯಾರ್ಥಿಗಳು ಒಂದು ವಾಹನವನ್ನು ಪ್ರತಿ ಕಿ.ಮೀ. ಗೆ 9 ರೂ.ನಂತೆ ಬಾಡಿಗೆಗೆ ತೆಗೆದುಕೊಳ್ಳುತ್ತಾರೆ. ಅವರು 325 ಕಿ.ಮೀ. ದೂರಕ್ರಮಿಸಿದರೆ, ಪ್ರತಿ ವಿದ್ಯಾರ್ಥಿಯು ನೀಡಬೇಕಾದ ಹಣವನ್ನು ಲೆಕ್ಕಹಾಕಿ. (ಕಠಿಣ)

32)ಅನಿತಾಳ ಹತ್ತಿರ ಇರುವ ಹಸು ಒಂದು ದಿನಕ್ಕೆ 8 ಲೀಟರ್ ಹಾಲುನೀಡುತ್ತದೆ. ಒಂದು ಲೀಟರ್ ಹಾಲಿನ ಮಾರುವ ಬೆಲೆ 18ರೂ. ಅವಳು ಒಂದು ತಿಂಗಳಿನಲ್ಲಿ ಗಳಿಸಿದ ಹಣವನ್ನು ತನ್ನ ನಾಲ್ಕು ಮಕ್ಕಳಿಗೆ ಸಮನಾಗಿ ಹಂಚಿದರೆ, ಪ್ರತಿಯೊಬ್ಬರಿಗೆ ಎಷ್ಟು ಹಣದೊರೆಯುತ್ತದೆ?

(ಕಠಿಣ)

ಅಧ್ಯಾಯ-13 **ಮಾನಸಿಕ ಗಣಿತ**

ಬಹು ಆಯ್ಕೆ ಪ್ರಶ್ನೆಗಳು.

1.ಒಂದು ಶಾಲೆಯಲ್ಲಿ 395 ವಿದ್ಯಾರ್ಥಿಗಳಿದ್ದಾರೆ ವಿದ್ಯಾರ್ಥಿಗಳ ಸಂಖ್ಯೆಯನ್ನು ಹತ್ತರ ಸ್ಥಾನದ ಸಮೀಪಕ್ಕೆ ಅಂದಾಜಿಸಿರಿ. (ಸುಲಭ)

A) 300 B)400 C)350 D)390

2)ಒಂದು ಊರಿನಲ್ಲಿ 1275 ಜನರಿದ್ದಾರೆ. ಜನರಸಂಖ್ಯೆಯನ್ನು ನೂರರ ಸ್ಥಾನದ ಸಮೀಪಕ್ಕೆ ಅಂದಾಜಿಸಿರಿ.(ಸುಲಭ)

A)1300 B)1280 C)1250 D) 1000

3)ಬುಟ್ಟಿಯಲ್ಲಿ 5791 ಹಣ್ಣುಗಳಿವೆ. ಸಾವಿರದ ಸ್ಥಾನದ ಸಮೀಪಕ್ಕೆ ಅಂದಾಜಿಸಿರಿ. (ಸುಲಭ)

A)5790 B)5800 C)6000 D)5500

4)ಸರಿತಾಳಬಳಿ 42,125 ರೂಪಾಯಿಗಳಿವೆ. ಈಹಣವನ್ನುಹತ್ತುಸಾವಿರದಸ್ಥಾನದಸಮೀಪಕ್ಕೆಅಂದಾಜಿಸಿರಿ.(ಸುಲಭ)

A)42,130 B)42,100 C)42,000 D)40,000

5)ಒಬ್ಬ ಕುರಿಕಾಯುವವನ ಬಳಿ 45 ಕುರಿಗಳಿವೆ ಹಾಗೂ ಇನ್ನೊಬ್ಬನ ಬಳಿ 132 ಕುರಿಗಳಿವೆ.

ಒಟ್ಟು ಕುರಿಗಳ ಸಂಖ್ಯೆಯನ್ನು ಹತ್ತರ ಸ್ಥಾನದ ಸಮೀಪಕ್ಕೆ ಅಂದಾಜಿಸಿರಿ .(ಸಾಧಾರಣ)

A)180 B)177 C)200 D)150

ಸರಿ ಅಥವಾ ತಪ್ಪು ಉತ್ತರವನ್ನು ಗುರುತಿಸಿ.

6)ಒಂದು ಸಂಖ್ಯೆಯನ್ನು ಅಗತ್ಯವಿರುವ ಸ್ಥಾನಕ್ಕೆ ಅಂದಾಜಿಸ ಬೇಕಾದರೆ ಆಸ್ಥಾನದ ಬಲಕ್ಕೆ ಇರುವ ಸಂಖ್ಯೆಯನ್ನು

ಪರಿಗಣಿಸಬೇಕು . (ಕಠಿಣ)

7)ಅಂದಾಜಿಸಬೇಕಾದರೆ ಸ್ಥಾನದ ಬಲಕ್ಕೆ ಇರುವ ಅಂಕಿ 5ಕ್ಕಿಂತ ಹೆಚ್ಚಾದರೆ ಅಂದಾಜಿಸಬೇಕಾದರೆ ಸ್ಥಾನದಲ್ಲಿರು

ವಾಂಕಿಗೆ ಒಂದನ್ನು ಕೂಡಬಾರದು. (ಕಠಿಣ)

ಬಿಟ್ಟ ಸ್ಥಳ ತುಂಬಿರಿ.

8)ಹತ್ತರ ಸ್ಥಾನದಲ್ಲಿ 1,2,3 ಅಥವಾ 4 ಇದ್ದಾಗ ಹತ್ತರ ಮತ್ತು ಬಿಡಿಸ್ಥಾನ ಅಂಕಿಗಳನ್ನು -------- ಗೆ

ಬದಲಾಯಿಸಬೇಕು. (ಕಠಿಣ)

9)ಸಂಖ್ಯೆಯನ್ನು ಹತ್ತುಸಾವಿರದ ಸ್ಥಾನದ ಸಮೀಪಕ್ಕೆ ಅಂದಾಜಿಸಬೇಕಾದರೆ ಸಾವಿರದ ಸ್ಥಾನದಲ್ಲಿ 5,6,7,8

ಅಥವಾ 9 ಇದ್ದಾಗ __________ ಸ್ಥಾನದಲ್ಲಿರುವ ಅಂಕಿಗೆ ಒಂದನ್ನು ಕೂಡಬೇಕು. (ಕಠಿಣ)

ಹೊಂದಿಸಿ ಬರೆಯಿರಿ. (ಸುಲಭ)

9) 65,487 ನ್ನು ಹತ್ತರ ಸ್ಥಾನದ ಸಮೀಪಕ್ಕೆ ಅಂದಾಜಿಸಿದಾಗ	ಅ)65,000
10)65,487 ನ್ನು ನೂರರ ಸ್ಥಾನದ ಸಮೀಪಕ್ಕೆ ಅಂದಾಜಿಸಿದಾಗ	ಆ)70,000
11)65,487 ನ್ನು ಸಾವಿರದ ಸ್ಥಾನದ ಸಮೀಪಕ್ಕೆ ಅಂದಾಜಿಸಿದಾಗ	ಇ)65,500
12)65,487 ನ್ನು ಹತ್ತು ಸಾವಿರದ ಸ್ಥಾನದ ಸಮೀಪಕ್ಕೆ ಅಂದಾಜಿಸಿದಾಗ	ಈ)65,490

1 ಅಂಕದ ಪ್ರಶ್ನೆಗಳು

13) 583 ನ್ನು ಹತ್ತರ ಸ್ಥಾನದ ಸಮೀಪಕ್ಕೆ ಅಂದಾಜಿಸಿರಿ. (ಸುಲಭ)
14) 2,837 ನ್ನು ಹತ್ತರ ಸ್ಥಾನದ ಸಮೀಪಕ್ಕೆ ಅಂದಾಜಿಸಿರಿ. (ಸುಲಭ)
15) 3,548 ನ್ನುನೂರರ ಸ್ಥಾನದ ಸಮೀಪಕ್ಕೆ ಅಂದಾಜಿಸಿರಿ. (ಸುಲಭ)
16) 5,764ನ್ನುನೂರರಸ್ಥಾನದಸಮೀಪಕ್ಕೆಅಂದಾಜಿಸಿರಿ. (ಸುಲಭ)
17)25,346 ನ್ನು ಸಾವಿರದ ಸ್ಥಾನದ ಸಮೀಪಕ್ಕೆ ಅಂದಾಜಿಸಿರಿ. (ಸುಲಭ)
18)35,756 ನ್ನು ಸಾವಿರದ ಸ್ಥಾನದ ಸಮೀಪಕ್ಕೆ ಅಂದಾಜಿಸಿರಿ. (ಸುಲಭ)
19)12,654 ನ್ನು ಹತ್ತು ಸಾವಿರದ ಸ್ಥಾನದ ಸಮೀಪಕ್ಕೆ ಅಂದಾಜಿಸಿರಿ . (ಸುಲಭ)
20) 25,748 ನ್ನು ಹತ್ತು ಸಾವಿರದ ಸ್ಥಾನದ ಸಮೀಪಕ್ಕೆ ಅಂದಾಜಿಸಿರಿ. (ಸುಲಭ)
21) 7,537 ನ್ನುಗರಿಷ್ಠ ಸ್ಥಾನದ ಸ್ಥಾನದ ಸಮೀಪಕ್ಕೆ ಅಂದಾಜಿಸಿರಿ.((ಕಠಿಣ)

22)3,469 ನ್ನು ಕನಿಷ್ಠ ಸ್ಥಾನದ ಸಮೀಪಕ್ಕೆ ಅಂದಾಜಿಸಿರಿ. (ಕಠಿಣ)

ಎರಡುಅಂಕದಪ್ರಶ್ನೆಗಳು.

23) 2,462 ಮತ್ತು 3,487ಗಳ ಮೊತ್ತವನ್ನು ಹತ್ತರ ಸ್ಥಾನದ ಸಮೀಪಕ್ಕೆ ಅಂದಾಜಿಸಿರಿ .(ಸಾಧಾರಣ)

24) 8,743 ಮತ್ತು 7,275ರ ಮೊತ್ತವನ್ನು ನೂರರ ಸ್ಥಾನದ ಸಮೀಪಕ್ಕೆ ಅಂದಾಜಿಸಿರಿ .(ಸಾಧಾರಣ)

25)24,316 ಮತ್ತು 34,861 ರ ಮೊತ್ತವನ್ನು ಸಾವಿರದ ಸ್ಥಾನದ ಸಮೀಪಕ್ಕೆ ಅಂದಾಜಿಸಿರಿ. (ಸಾಧಾರಣ)

26)38,527 ಮತ್ತು 32,596 ರ ಮೊತ್ತವನ್ನು ಹತ್ತರ ಸ್ಥಾನದ ಸಮೀಪಕ್ಕೆ ಅಂದಾಜಿಸಿರಿ. (ಸಾಧಾರಣ)

27)51,689 ಮತ್ತು 34,685 ರ ವ್ಯತ್ಯಾಸವನ್ನು ಹತ್ತರ ಸ್ಥಾನದ ಸಮೀಪಕ್ಕೆ ಅಂದಾಜಿಸಿರಿ. (ಸಾಧಾರಣ)

28)86,853 ಮತ್ತು 47,829 ರ ವ್ಯತ್ಯಾಸವನ್ನು ನೂರರ ಸ್ಥಾನದ ಸಮೀಪಕ್ಕೆ ಅಂದಾಜಿಸಿರಿ. (ಸಾಧಾರಣ)

29) 80,808 ಮತ್ತು 55,055 ರ ವ್ಯತ್ಯಾಸವನ್ನು ಸಾವಿರದ ಸ್ಥಾನದ ಸಮೀಪಕ್ಕೆ ಅಂದಾಜಿಸಿರಿ. (ಸಾಧಾರಣ)

30)77,777ಮತ್ತು 44,444 ರ ವ್ಯತ್ಯಾಸವನ್ನು ಹತ್ತು ಸಾವಿರದ ಸ್ಥಾನದ ಸಮೀಪಕ್ಕೆ ಅಂದಾಜಿಸಿರಿ. (ಸಾಧಾರಣ)

ಮೂರುಅಂಕದಪ್ರಶ್ನೆಗಳು.

31) 1,249 ಮತ್ತು 48 ರ ಗುಣಲಬ್ಧವನ್ನು ಗರಿಷ್ಠ ಸ್ಥಾನದ ಸಮೀಪಕ್ಕೆ ಅಂದಾಜಿಸಿರಿ. (ಸಾಧಾರಣ)

32) 428 ಮತ್ತು 54 ರ ಗುಣಲಬ್ಧವನ್ನು ಕನಿಷ್ಠ ಸ್ಥಾನದ ಸಮೀಪಕ್ಕೆ ಅಂದಾಜಿಸಿರಿ. (ಸಾಧಾರಣ)

33) 44,238 ಮತ್ತು 95 ರ ಭಾಗಲಬ್ಧವನ್ನು ಗರಿಷ್ಠ ಸ್ಥಾನದ ಸಮೀಪಕ್ಕೆ ಅಂದಾಜಿಸಿರಿ. (ಸಾಧಾರಣ)

34) 3,265 ಮತ್ತು 58 ರ ಭಾಗಲಬ್ಧವನ್ನು ಕನಿಷ್ಠ ಸ್ಥಾನದ ಸಮೀಪಕ್ಕೆ ಅಂದಾಜಿಸಿರಿ .(ಸಾಧಾರಣ)

ನಾಲ್ಕುಅಂಕದಪ್ರಶ್ನೆಗಳು.

35) ರಂಗಮಂದಿರದ ಯಜಮಾನನು ನಾಟಕ ಪ್ರದರ್ಶನಕ್ಕೆ ಟಿಕೇಟುಗಳನ್ನು ಪ್ರದರ್ಶನದ ಸಮಯದಲ್ಲಿ ನೀಡಲು ನಿರ್ಧರಿಸಿದನು. ರಂಗಮಂದಿರದಲ್ಲಿ88 ಆಸನಗಳನ್ನು ಹೊಂದಿರುವ 198 ಸಾಲುಗಳಿವೆ. ಪ್ರತಿಪ್ರದರ್ಶನಕ್ಕೆ ಬೇಕಾಗುವ ಟಕೇಟುಗಳ ಸಂಖ್ಯೆಯನ್ನುಅಂದಾಜಿಸಿರಿ. (ಕಠಿಣ)

36) 8 ಚಾಕಲೇಟಿನ ಪೊಟ್ಟಣಗಳಲ್ಲಿ ಒಟ್ಟು 768 ಚಾಕಲೇಟಗಳಿವೆ. ಪ್ರತಿ ಚಾಕಲೇಟ್ಗಳ ಸಂಖ್ಯೆಯನ್ನು ಅಂದಾಜುಮಾಡಿರಿ. (ಕಠಿಣ)

37)ಒಂದು ಸಿದ್ದ ಉಡುಪು ತಯಾರಿಕಾ ಕಂಪನಿಯು 16,783 ಅಂಗಿಗಳನ್ನು ಮತ್ತು 12,438 ಪ್ಯಾಂಟುಗಳನ್ನು ಒಂದು ತಿಂಗಳಲ್ಲಿ ತಯಾರು ಮಾಡುತ್ತದೆ. ತಯಾರಿಸಿದ ಒಟ್ಟು ಉಡುಪುಗಳ ಸಂಖ್ಯೆಯನ್ನು ಹತ್ತು ಸಾವಿರದ ಸಮೀಪಕ್ಕೆ ಅಂದಾಜುಮಾಡಿರಿ. (ಕಠಿಣ)

38)ಸಮಾಚಾರ ಪತ್ರಿಕೆಯನ್ನು ಮಾರುವವನು ಮೊದಲ ತಿಂಗಳಲ್ಲಿ 36,721 ಮತ್ತು ಎರಡನೇ ತಿಂಗಳಲ್ಲಿ 24,172 ಪತ್ರಿಕೆಗಳನ್ನು ಮಾರುತ್ತಾನೆ. ಎರಡನೇ ತಿಂಗಳಲ್ಲಿ ಎಷ್ಟು ಕಡಿಮೆ ಪತ್ರಿಕೆಗಳು ಮಾರಾಟವಾದವು ಎಂಬುದನ್ನು ಹತ್ತು ಸಾವಿರದ ಸ್ಥಾನದ ಸಮೀಪಕ್ಕೆ ಅಂದಾಜು ಮಾಡಿರಿ. (ಕಠಿಣ)

39)ಒಂದು ರೈಲು ಗಾಡಿಯು ಒಂದು ಗಂಟೆಯಲ್ಲಿ225 ಕಿ.ಮೀ. ಚಲಿಸುತ್ತದೆ.

ಒಂದು ದಿನದಲ್ಲಿ ಚಲಿಸುವ ದೂರವನ್ನು ಗರಿಷ್ಠ ಸ್ಥಾನದ ಬೆಲೆಗೆ ಅಂದಾಜು ಮಾಡಿರಿ. (ಕಠಿಣ)

40)ಒಬ್ಬ ಮರಗೆಲಸ ಮಾಡುವವನುನ ವೆಂಬರ್ತಿಂಗಳಲ್ಲಿ 18,634 ರೂಪಾಯಿಗಳನ್ನು ಮತ್ತು ಡಿಸೆಂಬರ್ತಿಂಗಳಲ್ಲಿ 32,645 ರೂಪಾಯಿಗಳನ್ನು ಗಳಿಸುತ್ತಾನೆ. ಡಿಸೆಂಬರ್ತಿಂಗಳಲ್ಲಿ ಎಷ್ಟು ಹೆಚ್ಚು ಹಣವನ್ನು ಗಳಿಸುತ್ತಾನೆ ಎಂಬುದನ್ನು ಹತ್ತು ಸಾವಿರದ ಸ್ಥಾನದ ಸಮೀಪಕ್ಕೆ ಅಂದಾಜಿಸಿರಿ. (ಕಠಿಣ)

ಅಧ್ಯಾಯ -14 ದಶಮಾಂಶಭಿನ್ನರಾಶಿಗಳು

1. ದಶಮಾಂಶ ಸಂಖ್ಯೆಯನ್ನು ಪದದಲ್ಲಿಬರೆ- 0.5 0.08 (ಸುಲಭ)

2. $\frac{2}{1}$ ನ್ನು ದಶಮಾಂಶದಲ್ಲಿ ಬರೆಯಿರಿ. (ಸುಲಭ)

3. ಸಂಖ್ಯೆಯಲ್ಲಿ ಬರೆ – ಸೊನ್ನೆ ಬಿಂದು ಒಂದು ಎರಡು. (ಸುಲಭ)

4. 8 ಮಿ.ಮೀ. = __________ ಸೆಂ. ಮೀ .(ಸುಲಭ)

5. ದಶಮಾಂಶದಲ್ಲಿ ಬರೆ – ಎರಡು ರೂಪಾಯಿ ಹದಿನೈದು ಪೈಸೆಗಳು. (ಸುಲಭ)

6. ಬಣ್ಣ ಹಚ್ಚಿರುವ ಭಾಗವನ್ನು ಭಿನ್ನರಾಶಿಯಲ್ಲಿ ಬರೆ. (ಸುಲಭ)



7. 15 ಮೀ. 6 ಸೆಂ. ಮೀ. = ______________ ಮೀ. (ಸುಲಭ)

8. ಭಿನ್ನರಾಶಿಯಲ್ಲಿನ ಅಂಶ ಛೇದ ಗುರುತಿಸಿ $\frac{6}{1}$ $\frac{8}{1}$, (ಸುಲಭ)

9. ಚಿತ್ರದಲ್ಲಿ ತೋರಿಸಿ $\frac{2}{4}$ $\frac{3}{5}$ (ಕಠಿಣ)

10. ದಶಮಾಂಶ ಮತ್ತು ರೂಪಾಯಿ ಚಿಹ್ನೆ ತೋರಿಸಿ. (ಸಾಧಾರಣ)

11. ನಿನ್ನ ಮತ್ತು ನಿನ್ನ ಗೆಳೆಯನ ತೂಕವನ್ನು ದಶಮಾಂಶದಲ್ಲಿ ಬರೆ. (ಸಾಧಾರಣ)

12. ದಶಮಾಂಶ ಕೋಷ್ಟಕ ಚಿತ್ರಬರೆ. (ಸಾಧಾರಣ)

13. ದಶಮಾಂಶ ಮತ್ತು ಭಿನ್ನರಾಶಿಗಳ ಸಂಖ್ಯೆಯನ್ನು ವಿಂಗಡಿಸಿಬರೆ. (ಸಾಧಾರಣ)

0.2, ,0.5, 0,6, ,, 0.7 $\frac{1}{4}$ $\frac{5}{1}$ $\frac{3}{4}$ $\frac{6}{8}$


14. ಅಳತೆ ಪಟ್ಟಿ ಚಿತ್ರ ಬರೆದು ಕೆಳಗಿನ ಕೆಳಗಿನ ಸಂಖ್ಯೆಗಳನ್ನು ಗುರುತಿಸಿ .(ಸಾಧಾರಣ)

0.4, 1.5, 2.5, 4.3, 3.2

15. ದಶಮಾಂಶ ಕೋಷ್ಟಕದಲ್ಲಿ ತೋರಿಸಿ. (ಕಠಿಣ)

263.5, 345.24

16. ಚಿತ್ರನೋಡಿದ ಶಮಾಂಶ ಭಿನ್ನರಾಶಿಯಲ್ಲಿ ಬರೆಯಿರಿ. (ಸುಲಭ)



17. $\frac{3}{4}$ ಮತ್ತು $\frac{1}{2}$ ರಸಮಾನ ಭಿನ್ನರಾಶಿ ಬರೆಯಿರಿ. (ಸಾಧಾರಣ)

18. ದಶಮಾಂಶ ಭಿನ್ನರಾಶಿಯಲ್ಲಿ ಬರೆ. 20 ರೂಪಾಯಿ ಮತ್ತು 25 ಪೈಸೆಗಳು, 65 ಪೈಸೆಗಳು.(ಸಾಧಾರಣ)

19. $\frac{2}{5}$, $\frac{1}{2}$ ನ್ನು ಛೇದ ಹತ್ತಕ್ಕೆ ಪರಿವರ್ತಿಸಿ. (ಸುಲಭ)

20. ದಶಮಾಂಶ ಭಿನ್ನರಾಶಿ ಎಂದರೇನು? ಉದಾಹರಣೆಕೊಡಿ. (ಸುಲಭ)

21. ಸರಿ ತಪ್ಪು ಗುರುತಿಸಿ. 108.06 ಪದಗಳಲ್ಲಿ ಬರೆ. (ಸುಲಭ)

22. $\frac{2}{1}$, $\frac{3}{1}$ ಚಿತ್ರದಲ್ಲಿ ತೋರಿಸಿ. (ಕಠಿಣ)

23. ಛೇದವನ್ನು 100 ಕ್ಕೆಪರಿವರ್ತಿಸಿ. $\frac{3}{}$ $\frac{6}{2}$ (ಕಠಿಣ)

24. ಕೆಳಗಿನ ಸಂಖ್ಯೆಯನ್ನು ದಶಮಾಂಶ ರೂಪದಲ್ಲಿ ಬರೆ .(ಸಾಧಾರಣ)

$\frac{2}{10}$, , $\frac{3}{10}$ $\frac{12}{10}$ $\frac{45}{10}$

ಅಧ್ಯಾಯ– 15 ಹಣ

1. 1 ರೂಪಾಯಿಗೆ _______ ಪೈಸೆಗಳು. (ಸುಲಭ)
2. 20 ರೂಪಾಯಿ 15 ಪೈಸೆದಶಮಾಂಶದಲ್ಲಿಬರೆದಾಗ = _______ (ಸಾಧಾರಣ)
3. ರೂ. 12.40 + ರೂ. 6.20 ಪೈ = ______ (ಸುಲಭ)
4. ರೂ. 5.20 –ರೂ. 2.10 ಪೈಸೆ = ______ (ಸುಲಭ)
5. ರೂ. 26.10 x ರೂ. 2 ರಗುಣಲಬ್ದ = _____ (ಸುಲಭ)
6. ರೂ. 120 ÷ರೂ 4ರಭಾಗಲಬ್ದ = _____ (ಸುಲಭ)
7. ಕೊಂಡ ವಸ್ತುಗಳಿಗೆ ನೀಡಬೇಕಾದ ಹಣದ ರಶೀದಿಯೇ _____ (ಸುಲಭ)
8. ಒಂದು ಪೆನ್ನಿನ ಬೆಲೆ 6 ರೂ ಆದರೆ 1 ಡಜನ್ಪೆನ್ನಿನ ಬೆಲೆ = ______ (ಸಾಧಾರಣ)
9. 12 ಚಾಕಲೇಟ್ಬೆಲೆ 96 ರೂ. ಆದರೆ 1 ಚಾಕಲೇಟ್ಬೆಲೆ = ______ (ಸಾಧಾರಣ)
10. 325 ಪೆನ್ನು ರೂಪಾಯಿಗಳಲ್ಲಿ ಬರೆದಾಗ = _____ (ಸಾಧಾರಣ)
11. ರೂ. 42ನ್ನು ಪೈಸೆಗಳಲ್ಲಿ ಬರೆದಾಗ = ______ (ಸಾಧಾರಣ)
12. ನನ್ನ ಹತ್ತಿರ ಇರುವ ಹಣ 15 ರೂ ಆದರೆ ಗೆಳೆಯನಿಗೆ 7 ರೂ. ಕೊಟ್ಟರೆ ಉಳಿಯುವ ಹಣ = ___ (ಕಠಿಣ)
13. ಹರಿಯು ರೂ. 15.20 ಗಳಿಗೆ ಒಂದು ಪುಸ್ತಕವನ್ನು ರೂ. 22.25 ಗಳಿಗೆ ಒಂದು ಕಂಪಾಸ್ಬಾಕ್ಸನ್ನು ರೂ. 5.20ಗಳಿಗೆ ಪೆನ್ಸಿಲ್‌ನ್ನು ಕೊಂಡುಕೊಂಡರೆ ಅವನು ಕೊಂಡ ಎಲ್ಲಾ ವಸ್ತುಗಳ ಒಟ್ಟು ಬೆಲೆ ಎಷ್ಟು? (ಕಠಿಣ)
14. ಶೀಲಾಳು ರೂ. 38.20 ಬೆಲೆಯ ಒಂದು ಚೆಂಡನ್ನು ಕೊಳ್ಳಬೇಕಾಗಿದೆ. ಅವಳ ಹತ್ತಿರ ರೂ. 24 ಮಾತ್ರ ಇದೆ. ಹಾಗಾದರೆ ಚೆಂಡನ್ನು ಕೊಳ್ಳಲು ಇನ್ನೂ ಎಷ್ಟು ಹೆಚ್ಚು ಹಣ ಬೇಕು? (ಕಠಿಣ)
15. ಒಂದು ಕೈಚೀಲದ ಬೆಲೆ ರೂ. 15.20 ಆದರೆ 6 ಕೈಚೀಲದ ಬೆಲೆ ಎಷ್ಟು? (ಸಾಧಾರಣ)
16. 6 ಬೊಂಬೆಯ ಬೆಲೆ ರೂ. 252 ಆದರೆ ಒಂದು ಬೊಂಬೆಯ ಬೆಲೆ ಎಷ್ಟು? (ಸಾಧಾರಣ)
17. ರಶೀದಿ ಎಂದರೇನು? (ಸುಲಭ)
18. ರಶೀದಿ (ಬಿಲ್) ಏನನ್ನು ಒಳಗೊಂಡಿರುತ್ತದೆ? (ಸುಲಭ)
19. ರೂ. 600 ರಿಂದರೂ. 328.20 ನ್ನು ಕಳೆಯಿರಿ. (ಸಾಧಾರಣ)
20. 1 ಕೆ.ಜಿ. ಸಕ್ಕರೆ ಬೆಲೆ ರೂ. 55.50 ಪೈ. ಆದರೆ 4 ಕೆ.ಜಿ. ಸಕ್ಕರೆ ಬೆಲೆ ಎಷ್ಟು? (ಸಾಧಾರಣ)
21. ವಿನೋದ ಮರಕೆಲಸ ಮಾಡಿ 7 ದಿನಗಳಲ್ಲಿರೂ. 9436 ಸಂಪಾದನೆ ಮಾಡಿದರೆ ಅವನ ಒಂದು ದಿನದ ಸಂಪಾದನೆ ಎಷ್ಟು? (ಸಾಧಾರಣ)
22. ಸಕ್ಕರೆ ಬೆಲೆ 20 ರೂ., ಅಕ್ಕಿ 45 ರೂ., ಗೋಧಿ 65 ರೂ,ಎಣ್ಣೆ 55 ರೂ, ಚಿಕ್ಕದೊಂದು ರಶೀದಿ ಬಿಲ್ತಯಾರಿಸಿ. (ಕಠಿಣ)
23. ಸರಿತಾಳಹತ್ತಿರಇದ್ದ**ಹಣ**ರೂ.4625.ಅವಳುಅದರಲ್ಲಿಒಂದು 2475 ರೂ. ಕೊಟ್ಟ ಡ್ರೆಸ್ಸ ರೀದಿಸಿದರೆ ಅವಳ ಹತ್ತಿರ ಉಳಿಯುವ ಹಣ ಎಷ್ಟು? (ಕಠಿಣ)
24. ರಮೇಶನು ಜ್ಯೋತಿ ದಿನಸಿ ಅಂಗಡಿಯಿದದಿ: 12-05-25 ರಂದುಕೊಂಡಪದಾರ್ಥಗಳು: ಅಕ್ಕಿಕಿ.ಗ್ರಾಂ. ರೂ. 30 ಕೆ.ಜಿ.ರಂತೆ 4 ಕೆ.ಜಿ., ಗೋಧಿ-25 ಕಿ.ಗ್ರಾಂ. ಗೆ 6 ಕೆ.ಜಿ., ಸಕ್ಕರೆ 45 ಕಿ. ಗ್ರಾಂ. ರಂತೆ 8 ಕೆ.ಜಿ., ಜೋಳ 30 ಕೆ.ಜಿ. ರಂತೆ 25 ಕೆ.ಜಿ. ದರ ಪಟ್ಟಿ ತಯಾರಿಸಿ ಕೆಳಗಿನ ಪ್ರಶ್ನೆಗೆ ಉತ್ತರಿಸಿ .(ಕಠಿಣ)
    1. ಸಕ್ಕರೆಬೆಲೆ = _______ 3. ಗ್ರಾಹಕನಹೆಸರು = ______
    2. ಅಂಗಡಿಹೆಸರು = _______ 4. ರಶೀದಿಯಒಟ್ಟುಮೊತ್ತ = _____

ಅಧ್ಯಾಯ – 16 ತೂಕ ಮತ್ತು ಗಾತ್ರ

I. ಬಿಟ್ಟ ಸ್ಥಳಗಳನ್ನು ತುಂಬಿರಿ.

1. ವಸ್ತುಗಳ ತೂಕವನ್ನು ನಿಖರವಾಗಿ ಅಳೆಯಲು ಇರುವ ಆದರ್ಶಮಾನ .... (ಸುಲಭ)
2. 1 ಕಿಲೋಗ್ರಾಂಗೆ ....ಗ್ರಾಂಗಳು (ಸುಲಭ)
3. ½ ಕಿಲೋಗ್ರಾಂಗೆ ....ಗ್ರಾಂಗಳು (ಸುಲಭ)
4. ¾ ಕಿಲೋಗ್ರಾಂಗೆ ....ಗ್ರಾಂಗಳು (ಸುಲಭ)
5. 1/4 ಕಿಲೋಗ್ರಾಂಗೆ ....ಗ್ರಾಂಗಳು (ಸುಲಭ)
6. 1 ಕ್ವಿಂಟಾಲ್ .... ಕಿಲೋಗ್ರಾಂ (ಸುಲಭ)
7. 1 ಟನ್ .... ಕಿಲೋಗ್ರಾಂ (ಸುಲಭ)
8. ಕಿಲೋಗ್ರಾಂನ್ನು ಗ್ರಾಂಗೆ ಪರಿವರ್ತಿಸಿದಾಗ ....ರಿಂದ ಗುಣಿಸಬೇಕು (ಸುಲಭ)
9. ಹೆಕ್ಟೋಗ್ರಾಂನ್ನು ಗ್ರಾಂಗೆ ಪರಿವರ್ತಿಸಿದಾಗ ....ರಿಂದ ಗುಣಿಸಬೇಕು. (ಸುಲಭ)
10. ಡೆಕಾಗ್ರಾಂನ್ನು ಗ್ರಾಂಗೆ ಪರಿವರ್ತಿಸಿದಾಗ ....ರಿಂದ ಗುಣಿಸಬೇಕು .(ಸುಲಭ)
11. ಗ್ರಾಂನ್ನು ಕಿಲೋಗ್ರಾಂಗೆ ಪರಿವರ್ತಿಸಿವಾಗ ....ರಿಂದ ಭಾಗಿಸಬೇಕು .(ಸುಲಭ)
12. ಮಿಲಿಗ್ರಾಂನ್ನು ಗ್ರಾಂಗೆ ಪರಿವರ್ತಿಸಿವಾಗ ....ರಿಂದ ಭಾಗಿಸಬೇಕು. (ಸುಲಭ)
13. ಕಿಲೋಗ್ರಾಂನ್ನು ಕ್ವಿಂಟಾಲ್ ಪರಿವರ್ತಿಸುವಾಗ ....ರಿಂದ ಭಾಗಿಸಬೇಕು. (ಸುಲಭ)

II. ಇವುಗಳನ್ನುಪರಿವರ್ತಿಸಿ:-

14. 8 ಕಿ.ಗ್ರಾಂ = ...ಗ್ರಾಂ (ಸುಲಭ)
15. 15 ಕಿ.ಗ್ರಾಂ = ...ಮಿಲಿಗ್ರಾಂ (ಸುಲಭ)

16. 7,000 **ಗ್ರಾಂ** = ...**ಕಿ**.**ಗ್ರಾಂ** (**ಸುಲಭ**)

17. 12 **ಕ್ವಿಂಟಾಲ್** = ...**ಕಿ**.**ಗ್ರಾಂ** (**ಸುಲಭ**)

18. 950 **ಮಿ**.**ಗ್ರಾಂ** = ...**ಗ್ರಾಂ** (**ಸುಲಭ**)

19. 1,500 **ಕಿ**.**ಗ್ರಾಂ** =..**ಕ್ವಿಂಟಾಲ್** (**ಸುಲಭ**)

20. 1,000 **ಮಿ**.**ಗ್ರಾಂ**. =.. .**ಗ್ರಾಂ** (**ಸುಲಭ**)

21. **ದ್ರವದಗಾತ್ರವನ್ನುಅಳೆಯುವಆದರ್ಶಮಾನ** .... (**ಸುಲಭ**)

22. **ಲೀಟರ್ ಗೆ** ....**ಮಿಲಿಲೀಟರ್** (**ಸುಲಭ**)

23. ½ **ಲೀಟರ್ ಗೆ** ....**ಮಿಲಿಲೀಟರ್** (**ಸುಲಭ**)

24. ¼ **ಲೀಟರ್ ಗೆ** ....**ಮಿಲಿಲೀಟರ್** (**ಸುಲಭ**)

25. 1 **ಕಿಲೋಲೀಟರ್‌ಗೆ**..**ಲೀಟರ್** (**ಸುಲಭ**)

26. **ಗಾತ್ರದ ದೊಡ್ಡ ಆದರ್ಶಮಾನವನ್ನು ಚಿಕ್ಕ ಆದರ್ಶಮಾನಕ್ಕೆ ಪರಿವರ್ತಿಸುವಾಗ**

.... (**ಸುಲಭ**)

27. **ಕಿಲೋಲೀಟರ್ ನ್ನುಲೀಟರ್‌ಗೆಪರಿವರ್ತಿಸುವಾಗ**....................................**ಗುಣಿಸಬೇಕು** .(**ಸುಲಭ**)

28. **ಹೆಕ್ಟೋಲೀಟರ್ ನ್ನುಲೀಟರ್‌ಗೆ ಪರಿವರ್ತಿಸುವಾಗ**....................................**ಗುಣಿಸಬೇಕು**. (**ಸುಲಭ**)

29. **ಡೆಕಾಲೀಟರ್ ನ್ನು ಲೀಟರ್‌ಗೆ ಪರಿವರ್ತಿಸುವಾಗ**.......................................**ಗುಣಿಸಬೇಕು**. (**ಸುಲಭ**)

30. **ಲೀಟರ್ ನ್ನು ಕಿಲೋಲೀಟರ್‌ಗೆ ಪರಿವರ್ತಿಸುವಾಗ**....................................**ಭಾಗಿಸಬೇಕು** .(**ಸುಲಭ**)

31. **ಲೀಟರ್ ನ್ನು ಹೆಕ್ಟೋಲೀಟರ್‌ಗೆ ಪರಿವರ್ತಿಸುವಾಗ**....................................**ಭಾಗಿಸಬೇಕು** (**ಸುಲಭ**)

32. **ಮಿಲಿಲೀಟರ್ ನ್ನು ಲೀಟರ್‌ಗೆ ಪರಿವರ್ತಿಸುವಾಗ**.................................... .**ಭಾಗಿಸಬೇಕು** .(**ಸುಲಭ**)

33. 6 **ಲೀ**= ....**ಮಿ**.**ಲೀ**. (**ಸುಲಭ**)

34. 5 **ಕಿ**.**ಲೀ**=...**ಲೀ** (**ಸುಲಭ**)

35. 500 **ಮಿಲೀ** =...**ಲೀ** (**ಸುಲಭ**)

36.7,000 **ಲೀ** =..**ಕಿ**. **ಲೀ**(**ಸುಲಭ**)

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. Marks :-02

37. **ಹೆಚ್ಚು ತೂಕದ ವಸ್ತುಗಳನ್ನು ಅಳತೆ ಮಾಡಲು ಬಳಸುವ ಆದರ್ಶಮಾನಗಳು ಯಾವುವು**?(**ಸುಲಭ**)

38. **ಕಡಿಮೆ ತೂಕದ ವಸ್ತುಗಳನ್ನುಅಳತೆ ಮಾಡಲು ಬಳಸುವ ಆದರ್ಶಮಾನಗಳು ಯಾವುವು**? (**ಸುಲಭ**)

39. 3 **ಕಿ.ಗ್ರಾಂ ತೂಕವು ಎಷ್ಟು ಗ್ರಾಂಗೆ ಸಮ** ? **ಪರಿವರ್ತಿಸಿಬರೆ**. (**ಸುಲಭ**)

40. 4 **ಹೆಕ್ಟೋಗ್ರಾಂ ತೂಕವು ಎಷ್ಟು ಗ್ರಾಂಗೆಸಮ** ? (**ಸುಲಭ**)

41. 15 **ಡೆಕಾಗ್ರಾಂ ತೂಕವು ಎಷ್ಟು ಗ್ರಾಂಗೆಸಮ** ? (**ಸುಲಭ**)

42. 5 **ಕ್ವಿಂಟಾಲ್ ತೂಕವು ಎಷ್ಟುಕಿ. ಗ್ರಾಂಗೆ ಸಮ** ? **ಪರಿವರ್ತಿಸಿಬರೆ**. (**ಸುಲಭ**)

43. 500 **ಮಿಲಿಗ್ರಾಂ ತೂಕವು ಎಷ್ಟು ಗ್ರಾಂಗೆ ಸಮ** ? **ಪರಿವರ್ತಿಸಿಬರೆ** (**ಸುಲಭ**)

44. 1400 **ಸೆಂಟಿಗ್ರಾಂ ತೂಕವು ಎಷ್ಟು ಗ್ರಾಂಗೆಸಮ** ? **ಪರಿವರ್ತಿಸಿಬರೆ** .(**ಸಾಧಾರಣ**)

45. 280 **ಡೆಸಿಗ್ರಾಂ ತೂಕವು ಎಷ್ಟು ಗ್ರಾಂಗೆ ಸಮ** ? **ಪರಿವರ್ತಿಸಿಬರೆ** .(**ಸಾಧಾರಣ**)

46. 750 **ಗ್ರಾಂ ತೂಕವು ಎಷ್ಟು ಕಿಲೋಗ್ರಾಂಗೆ ಸಮ** ? **ಪರಿವರ್ತಿಸಿಬರೆ**. (**ಸಾಧಾರಣ**)

47. 850 **ಕಿ.ಗ್ರಾಂ ತೂಕವು ಎಷ್ಟು ಕ್ವಿಂಟಾಲ್ಗೆ ಸಮ** ? **ಪರಿವರ್ತಿಸಿಬರೆ**. (**ಕಠಿಣ**)

ಈ ಕೆಳಗಿನ ಲೆಕ್ಕಗಳನ್ನು ಕೂಡಿಸಿ

48. 4 **ಕಿ.ಗ್ರಾಂ** , 250 **ಗ್ರಾಂ**, 12 **ಕಿ.ಗ್ರಾಂಮತ್ತು** 355 **ಗ್ರಾಂ** (**ಸಾಧಾರಣ**)

49. 24 **ಕಿ.ಗ್ರಾಂ**, 432 **ಗ್ರಾಂ**, 37 **ಕಿ.ಗ್ರಾಂ**, **ಮತ್ತು** 350 **ಗ್ರಾಂ** (**ಸಾಧಾರಣ**)

50. 13 **ಕಿ.ಗ್ರಾಂ**, 450 **ಗ್ರಾಂ**, 14 **ಕಿ.ಗ್ರಾಂ**, **ಮತ್ತು** 550 **ಗ್ರಾಂ** (**ಸಾಧಾರಣ**)

51. 7 **ಕಿ.ಗ್ರಾಂ**, 370 **ಗ್ರಾಂ**, 8 **ಕಿ.ಗ್ರಾಂ**, **ಮತ್ತು** 430 **ಗ್ರಾಂ**, 7 **ಕಿ.ಗ್ರಾಂ**, 220**ಗ್ರಾ ಮತ್ತು** 430**ಗ್ರಾಂ** (**ಕಠಿಣ**)

ಈ ಕೆಳಗಿನ ಲೆಕ್ಕಗಳನ್ನು ಕಳೆಯಿರಿ

52. 28 **ಕಿ.ಗ್ರಾಂ** 550**ಗ್ರಾಂನಿಂದ** 13.**ಕಿ.ಗ್ರಾಂ** 250**ಗ್ರಾಂನ್ನು ಕಳೆಯಿರಿ**. (**ಸಾಧಾರಣ**)

53. 70 **ಕಿ.ಗ್ರಾಂ** 675 **ಗ್ರಾಂನಿಂದ** 35.**ಕಿ.ಗ್ರಾಂ** 550**ಗ್ರಾಂನ್ನು ಕಳೆಯಿರಿ**. (**ಸಾಧಾರಣ**)

54. 85 **ಕಿ.ಗ್ರಾಂ** 730**ಗ್ರಾಂನಿಂದ** 55.**ಕಿ.ಗ್ರಾಂ** 335**ಗ್ರಾಂನ್ನು ಕಳೆಯಿರಿ**. (**ಸಾಧಾರಣ**)

55. 75 **ಕಿ.ಗ್ರಾಂ** 475 **ಗ್ರಾಂನಿಂದ** 34.**ಕಿ.ಗ್ರಾಂ** 585 **ಗ್ರಾಂನ್ನು ಕಳೆಯಿರಿ** .(**ಸಾಧಾರಣ**)

56. 40 **ಕಿ.ಗ್ರಾಂ** 360 **ಗ್ರಾಂನಿಂದ** 25**ಕಿ.ಗ್ರಾಂ** 200**ಗ್ರಾಂನ್ನು ಕಳೆಯಿರಿ** .(**ಸಾಧಾರಣ**)

ಈ ಕೆಳಗಿನ ಲೆಕ್ಕಗಳನ್ನು ಬಿಡಿಸಿರಿ:-

57. **ಹೆಚ್ಚು ಗಾತ್ರದ ದ್ರವಗಳನ್ನು ಅಳತೆ ಮಾಡಲು ಬಳಸುವ ಆದರ್ಶಮಾನಗಳು ಯಾವುವು**?

(**ಸಾಧಾರಣ**)

58. **ಕಡಿಮೆ ಗಾತ್ರದ ದ್ರವಗಳನ್ನು ಅಳತೆ ಮಾಡಲು ಬಳಸುವ ಆದರ್ಶಮಾನಗಳು ಯಾವುವು**?

(**ಸಾಧಾರಣ**)

59. **ಲೀಟರನ್ನುಕಿಲೋಲೀಟರ್‌ಗೆಪರಿವರ್ತಿಸುವಾಗಏನುಮಾಡಬೇಕು**? (**ಕಠಿಣ**)

ಇವುಗಳನ್ನುಪರಿವರ್ತಿಸಿರಿ:-

60. 4 **ಕಿಲೋಲೀಟರ್ ಗಾತ್ರವು ಎಷ್ಟು ಲೀಟರ್‌ಗೆ ಸಮ** ? (**ಸಾಧಾರಣ**)

61. 5 **ಹೆಕ್ಟೋಲೀಟರ್ ಗಾತ್ರವುಎಷ್ಟು ಲೀಟರ್‌ಗೆ ಸಮ** ? (**ಸಾಧಾರಣ**)

62. 17 **ಡೆಕಾಲೀಟರ್ ಗಾತ್ರವು ಎಷ್ಟು ಲೀಟರ್‌ಗೆ ಸಮ** ? (**ಸಾಧಾರಣ**)

63. 7000 **ಲೀಟರ್ ಗಾತ್ರವು ಎಷ್ಟು ಕಿಲೋಲೀಟರ್‌ಗೆ ಸಮ**? (**ಸಾಧಾರಣ**)

64. 1,200 **ಲೀಟರ್ ಗಾತ್ರವು ಎಷ್ಟು ಹೆಕ್ಟೋಲೀಟರ್‌ಗೆ ಸಮ**? (**ಸಾಧಾರಣ**)

65. 900 **ಲೀಟರ್ ಗಾತ್ರವು ಎಷ್ಟು ಡೆಕಾಲೀಟರ್‌ಗೆ ಸಮ**?

(**ಸಾಧಾರಣ**)

66. 15,000 **ಮಿಲಿಲೀಟರ್ ಗಾತ್ರವು ಎಷ್ಟು ಲೀಟರ್‌ಗೆ ಸಮ**? (**ಸಾಧಾರಣ**)

ಇವುಗಳನ್ನು ಕೂಡಿರಿ

67. 3 **ಲೀ** , 250 **ಮಿಲೀ**, 750 **ಮಿಲೀ ಮತ್ತು** 6 **ಲೀ**, 500 **ಮಿಲೀ** (**ಸಾಧಾರಣ**)

68. 15 **ಲೀ**, 450 **ಮಿಲೀ**, 5**ಲೀ**, 350**ಮಿಲೀ**, **ಮತ್ತು** 21 **ಲೀ** 750 **ಮಿಲೀ** (**ಸಾಧಾರಣ**)

69. 12**ಲೀ**, 550 **ಮಿಲೀ**, 14**ಲೀ**, 450**ಮಿಲೀ ಮತ್ತು** 12 **ಲೀ**, 650 (**ಸಾಧಾರಣ**)

71. 18 **ಲೀ**, 500 **ಮಿಲೀ**, **ಮತ್ತು** 6 **ಲೀ** , 750 **ಮಿಲೀ ಅನ್ನು ಕೂಡಿರಿ** (**ಸಾಧಾರಣ**)

ಇವುಗಳನ್ನು ಕಳೆಯಿರಿ

72. 25 **ಲೀ** , 350**ಮಿಲೀ**, **ನಿಂದ** 15**ಲೀ**, 750 **ಮಿಲೀ**, **ನ್ನು ಕಳೆಯಿರಿ**. (**ಸಾಧಾರಣ**)

73. 64 **ಲೀ** , 450**ಮಿಲೀ**, **ನಿಂದ** 24 **ಲೀ**, 550 **ಮಿಲೀ**, **ನ್ನು ಕಳೆಯಿರಿ**. (**ಸಾಧಾರಣ**)

74. 75 **ಲೀ** , 750**ಮಿಲೀ**, **ನಿಂದ** 45**ಲೀ**, 800 **ಮಿಲೀ**, **ನ್ನು ಕಳೆಯಿರಿ**. (**ಕಠಿಣ**)

75. 55 **ಕಿ.ಲೀ** , **ನಿಂದ** 34 **ಕಿ.ಲೀ**, 750 **ಲೀ**, **ನ್ನು ಕಳೆಯಿರಿ** (**ಕಠಿಣ**)

ಕೆಳಗಿನ ಸಮಸ್ಯೆ ಲೆಕ್ಕಗಳನ್ನು ಬಿಡಿಸಿರಿ

76. **ಸುಜಲನು ಅಂಗಡಿಯಿಂದ** 16 **ಕಿ.ಗ್ರಾಂ ಬೆಲ್ಲ ಮತ್ತು** 15 **ಕಿ.ಗ್ರಾಂ. ಅಕ್ಕಿಯನ್ನು ಕೊಂಡು ಕೊಂಡನು. ಎರಡೂ ಪೊಟ್ಟಣಗಳನ್ನು ಒಂದೇ ಚೀಲದಲ್ಲಿ ಹಾಕಿದನು .ಹಾಗಾದರೆ ಆ ಚೀಲದಲ್ಲಿರುವ ವಸ್ತುಗಳ ಒಟ್ಟು ತೂಕವೆಷ್ಟು** ? (**ಕಠಿಣ)**

77. **ಒಂದು ಶಾಲೆಯ ಉಗ್ರಾಣದಲ್ಲಿ ಅಕ್ಷರ ದಾಸೋಹಕ್ಕಾಗಿ ಒದಗಿಸಿದ** 82 **ಕಿ.ಗ್ರಾಂ ಅಕ್ಕಿ ಇದೆ. ಇದರಲ್ಲಿ**16**ಕಿ.ಗ್ರಾಂ ಅಕ್ಕಿಯನ್ನು ಊಟಕ್ಕಾಗಿ ಉಪಯೋಗಿಸಿದರೆ ಉಳಿದ ಅಕ್ಕಿಎಷ್ಟು**? (**ಕಠಿಣ**)

78. **ಒಂದು ಚೀಲದಲ್ಲಿ** 20 **ಕಿ.ಗ್ರಾಂ ರವೆಯನ್ನು ತುಂಬಬಹುದು. ಹಾಗಾದರೆ** 140 **ಕಿ.ಗ್ರಾಂ ರವೆಯನ್ನು ತುಂಬಲು ಅಂತಹ ಎಷ್ಟು ಚೀಲಗಳು ಬೇಕು**? (**ಕಠಿಣ**)

79. **ನ್ಯಾಯ ಬೆಲೆ ಅಂಗಡಿಯಲ್ಲಿ ಒಬ್ಬ ವ್ಯಕ್ತಿಗೆ** 12 **ಕಿ.ಗ್ರಾಂ ಅಕ್ಕಿಯನ್ನು ಕೊಡುತ್ತಾನೆ. ರಾಮಯ್ಯನ ಕುಟುಂಬದಲ್ಲಿ** 4 **ಜನ ಸದಸ್ಯರಿದ್ದಾರೆ. ಹಾಗಾದರೆ ಅವನ ಕುಟುಂಬಕ್ಕೆ ದೊರೆಯುವ ಒಟ್ಟು ಅಕ್ಕಿಯ ತೂಕ ಎಷ್ಟು**? (**ಕಠಿಣ**)

80. **ಕಾಳಪ್ಪ, ಚೆನ್ನಪ್ಪ, ತಿಮ್ಮಪ್ಪ , ಬೊಮ್ಮಯ್ಯ ಈ ನಾಲ್ಕು ಜನ ರೈತರು ಸಮನಾಗಿ ದುಡ್ಡು ಹಾಕಿಕೊಂಡು** 50 **ಕಿ.ಗ್ರಾಂ ತೂಕದ ಒಂದು ಚೀಲ ಸೂರ್ಯಕಾಂತಿ ಬಿತ್ತನೆ ಬೀಜವನ್ನು ತಂದರು. ಇದನ್ನು** 4 **ಜನರೂ ಸಮನಾಗಿ ಹಂಚಿಕೊಂಡರೆ , ಪ್ರತಿಯೊಬ್ಬರಿಗೂ ದೊರೆಯುವ ಬಿತ್ತನೆ ಬೀಜದ ತೂಕವೆಷ್ಟು**? (**ಕಠಿಣ**)

81. 18 ಕಿ.ಗ್ರಾಂ ಸಕ್ಕರೆಯನ್ನು 4 ಚೀಲಗಳಿಗೆ ಸಮನಾಗಿ ಹಂಚಿತುಂಬಲಾಗಿದೆ. ಹಾಗಾದರೆ ಪ್ರತಿ ಚೀಲದಲ್ಲಿರುವ ಸಕ್ಕರೆ ತೂಕವೆಷ್ಟು? (ಕಠಿಣ)

82. ಒಬ್ಬ ರೈತನು ತನ್ನ ಒಂದು ಜಮೀನಿನಲ್ಲಿ 60 ಕಿ.ಗ್ರಾಂ 400 ಗ್ರಾಂ ಈರುಳ್ಳಿಯನ್ನು ಬೆಳೆದನು. ತನ್ನ ಮತ್ತೊಂದು ಜಮೀನಿನಲ್ಲಿ 56 ಕಿ.ಗ್ರಾಂ ಈರುಳ್ಳಿಯನ್ನು ಬೆಳೆದನು. ಅವನು ಬೆಳೆದ ಒಟ್ಟು ಈರುಳ್ಳಿಯಲ್ಲಿ 98 ಕಿ.ಗ್ರಾಂ 200 ಗ್ರಾಂನ್ನು ಮಾರಾಟಮಾಡಿದನು. ಅವನಲ್ಲಿ ಉಳಿದ ಈರುಳ್ಳಿಯ ತೂಕವೆಷ್ಟು ? (ಕಠಿಣ)

83. ನಿನ್ನ ತಂದೆ ಕಛೇರಿಯಲ್ಲಿ ಕೆಲಸ ಮುಗಿಸಿ ಮನೆಗೆ ಬರುವಾಗ ಅಂಗಡಿಯಿಂದ 3 ಲೀ , 250 ಮಿಲೀ ಕಡಲೆಕಾಯಿ ಎಣ್ಣೆಯನ್ನು ತಂದರು. ಅದೇ ದಿನ ನಿನ್ನ ತಾಯಿಯು 1 ಲೀ. 500 ಮಿಲೀ. ಕಡಲೆಕಾಯಿ ಎಣ್ಣೆಯನ್ನು ತಂದಿದ್ದರು. ಹಾಗಾದರೆ ಅವರಿಬ್ಬರೂ ತಂದ ಎಣ್ಣೆಯ ಒಟ್ಟು ಅಳತೆ ಎಷ್ಟು?

(ಕಠಿಣ)

84. ಒಬ್ಬ ಹಾಲಿನ ವ್ಯಾಪಾರಿಯ ಬಳಿ 25 ಲೀ . ಹಾಲುಇದೆ. ಇದರಲ್ಲಿಅವನು 16 ಲೀ 750 ಮಿಲೀ.ಹಾಲನ್ನುಮಾರಿದನು . ಅವನಲ್ಲಿ ಉಳಿದಿರುವ ಹಾಲು ಎಷ್ಟು ? (ಕಠಿಣ)

85. ಒಂದು ಬಾಟಲಿಯಲ್ಲಿ 1 ಲೀ 500 ಮಿಲೀ. ಗಂಧದ ಎಣ್ಣೆಇದೆ. ಈ ಎಣ್ಣೆಯನ್ನು 250 ಮಿಲೀ ಹಿಡಿಸುವ ಚಿಕ್ಕ ಬಾಟಲಿಗಳಿಗೆ ಸಮನಾಗಿ ಹಂಚಿಪ್ಯಾಕ್ ಮಾಡಬೇಕಿದೆ. ಹಾಗಾದರೆ ಬೇಕಾಗುವ ಚಿಕ್ಕ ಬಾಟಲಿಗಳೆಷ್ಟು? (ಕಠಿಣ)

86. ಒಂದು ಲೋಟದಲ್ಲಿ300 ಮಿಲೀ. ನೀರಿದೆ. ಮತ್ತೊಂದು ಲೋಟದಲ್ಲಿ 250 ಮಿಲೀ. ನೀರಿದೆ. ಈ ಎರಡೂ ಲೋಟದ ನೀರನ್ನು ಒಂದು ಪಾತ್ರೆಗೆ ಸುರಿಯಲಾಗಿದೆ .ಹಾಗಾದರೆ ಪಾತ್ರುಯಲ್ಲಿರುವ ನೀರಿನ ಅಳತೆ ಎಷ್ಟು ? (ಕಠಿಣ)

87. ಒಂದು ಕ್ಯಾನಿನಲ್ಲಿ 15 ಲೀಸನ್ ಪ್ಲವರ್ (ಸೂರ್ಯಕಾಂತಿ) ಎಣ್ಣೆ ಇದೆ. ಇದರಲ್ಲಿ ರಾಣಿಯು ಮೊದಲ ತಿಂಗಳು ಅಡುಗೆಗಾಗಿ 3 ಲೀ . 600 ಮಿಲೀ. ಎಣ್ಣೆಯನ್ನುಉಪಯೋಗಿಸಿದಳು. ಮತ್ತುಎರಡನೇತಿಂಗಳು 5 ಲೀ. 300 ಮಿಲೀಎಣ್ಣೆಯನ್ನುಉಪಯೊಗಿಸಿದಳು. ಕ್ಯಾನಿನಲ್ಲಿ ಉಳಿದಿರುವಎಣ್ಣೆಎಷ್ಟು? (ಕಠಿಣ)

88. ಒಂದು ಬಾಟಲಿಯಲ್ಲಿ 200 ಮಿಲೀ. ಹಾಲು ತುಂಬಿದೆ. ಅಷ್ಟೇ ಅಳತೆಯ 5 ಬಾಟಲಿಗಳಲ್ಲಿರುವ ಒಟ್ಟು ಹಾಲು ಎಷ್ಟು? (ಕಠಿಣ)

89. **ಒಂದು ಪಾತ್ರೆಯಲ್ಲಿ** 1 **ಲೀ** 800 **ಮಿಲೀ. ಚಹಾ ಇದೆ. ಇದನ್ನು ಒಂದೇ ಅಳತೆಯ** 12 **ಲೋಟಗಳಿಗೆ ಸಮನಾಗಿ ಹಂಚಲಾಗಿದೆ . ಹಾಗಾದರೆ ಪ್ರತಿ ಲೋಟದಲ್ಲಿರುವ ಚಹಾಎಷ್ಟು** ? (**ಕಠಿಣ**)

90. **ಒಬ್ಬ ವ್ಯಕ್ತಿಯು ಒಂದು ದಿನಕ್ಕೆ** 2 **ಲೀ**. 300 **ಮಿಲೀ ನೀರನ್ನು ಕುಡಿಯುತ್ತಾನೆ. ಹಾಗಾದರೆ** 10 **ದಿನಗಳಲ್ಲಿ ಅವನು ಎಷ್ಟು ನೀರು ಕುಡಿಯುತ್ತಾನೆ**. ? (**ಕಠಿಣ**)

91. 8 **ತಂಬಿಗೆ ನೀರು ಹಾಕಿ ಒಂದು ಪಾತ್ರೆಯನ್ನು ತುಂಬಿಸಲಾಗಿದೆ. ಆಪಾತ್ರೆಯಲ್ಲಿ** 5 **ಲೀ**. 600 **ಮಿಲೀ. ನೀರು ತುಂಬಿದ್ದರೆ ಪ್ರತಿ ತಂಬಿಗೆ ನೀರಿನ ಅಳತೆ ಎಷ್ಟು**? (**ಕಠಿಣ**)

92. 100 **ಮಿಲೀ ಕಬ್ಬಿನ ಹಾಲನ್ನು** 4 **ಜನ ಸ್ನೇಹಿತರಿಗೆ ಸಮನಾಗಿ ಹಂಚಲಾಗಿದೆ. ಹಾಗಾದರೆ ಪ್ರತಿಯೊಬ್ಬರಿಗೂ ದೊರೆತ ಕಬ್ಬಿನ ಹಾಲಿನ ಅಳತೆ ಎಷ್ಟು** ? (**ಕಠಿಣ**)

ಅಧ್ಯಾಯ -17: ಕಾಲ

ಒಂದು ಅಂಕದ ಪ್ರಶ್ನೆಗಳು

1. 10:15. ಬೆಳಿಗ್ಗೆ ಇದನ್ನು am. ಅಥವಾ pm ನಲ್ಲಿ ಬರೆಯಿರಿ (ಸುಲಭ)
2. 5:35ಸಂಜೆ ಇದನ್ನು am. ಅಥವಾ pm ನಲ್ಲಿ ಬರೆಯಿರಿ (ಸಾಧಾರಣ)
3. 23:25ಇದನ್ನು 12ಗಂಟೆಗಡಿಯಾರಕ್ಕೆಪರಿವರ್ತಿಸಿ am. ಅಥವಾ pm ನಲ್ಲಿ ಬರೆಯಿರಿ (ಸುಲಭ)
4. ಸಂಜೆ 6:30 ಇದನ್ನು 24ಗಂಟೆಗಡಿಯಾರಕ್ಕೆಪರಿವರ್ತಿಸಿ am. ಅಥವಾ pm ನಲ್ಲಿ ಬರೆಯಿರಿ (ಸುಲಭ)
5. ಬೆಳಿಗ್ಗೆ 8:30 ಇದನ್ನು 24ಗಂಟೆಗಡಿಯಾರಕ್ಕೆಪರಿವರ್ತಿಸಿ am. ಅಥವಾ pm ನಲ್ಲಿ ಬರೆಯಿರಿ (ಸುಲಭ)
6. ಒಂದುನಿಮಿಷಕ್ಕೆ ಎಷ್ಟು ಸೆಕೆಂಡ್ ಗಳು ? (ಸುಲಭ)
7. ಒಂದುಗಂಟೆಗೆಎಷ್ಟು ನಿಮಿಷಗಳು ? (ಸುಲಭ)
8. ಫೆಬ್ರುವರಿ ತಿಂಗಳಿನಲ್ಲಿ ಎಷ್ಟು ದಿನಗಳು? (ಸುಲಭ)
9. ಬೆಳಿಗ್ಗೆ 7ಗಂಟೆಯಿಂದ ಯಿಂದಸಂಜೆ 2ಗಂಟೆಯವರೆಗೆ ಎಷ್ಟು ಗಂಟೆಗಳು? (ಸಾಧಾರಣ)
10. 1 ಗಂಟೆ 15ನಿಮಿಷಗಳು ಎಂದರೆ ಎಷ್ಟು ನಿಮಿಷಗಳು? (ಸುಲಭ)
11. 90ನಿಮಿಷಗಳು ಎಂದರೆ ಎಷ್ಟು ಗಂಟೆ ಎಷ್ಟು ನಿಮಿಷಗಳು? (ಸಾಧಾರಣ)
12. ಸಮಯವನ್ನು ತೋರಿಸುವ ಸಾಧನ ಯಾವುದು? (ಸಾಧಾರಣ)
13. ಒಂದು ವರ್ಷಕ್ಕೆ ಎಷ್ಟು ದಿನಗಳು? (ಸಾಧಾರಣ)
14. ಅಧಿಕ ವರ್ಷ ಎಂದರೇನು? (ಸುಲಭ)
15. ಗಡಿಯಾರದ ದೊಡ್ಡ ಮುಳ್ಳು ಯಾವ ಸಮಯವನ್ನು ತೋರಿಸುತ್ತದೆ? (ಸುಲಭ)
16. ಒಂದು ದಿನದಲ್ಲಿ ಎಷ್ಟು ನಿಮಿಷಗಳಿವೆ? (ಸಾಧಾರಣ)
17. ಗಡಿಯಾರದ ಸಣ್ಣ ಮುಳ್ಳು ಯಾವುದನ್ನು ತೋರಿಸುತ್ತದೆ? (ಸುಲಭ)
18. ಒಂದು ದಿನದಲ್ಲಿ ಎಷ್ಟು ಗಂಟೆಗಳು? (ಸಾಧಾರಣ)

19. 2004 ಇದು ಅಧಿಕ ವರ್ಷವೇ? (ಸಾಧಾರಣ)

20. 2010ಇದು ಅಧಿಕ ವರ್ಷವೇ ಅಥವಾ ಸಾಮಾನ್ಯ ವರ್ಷವೇ? (ಸಾಧಾರಣ)

ಎರಡು ಅಂಕಗಳ ಪ್ರಶ್ನೆಗಳು

21. 4ಗಂಟೆ 40ನಿಮಿಷ ಮತ್ತು 6 ಗಂಟೆ 30ನಿಮಿಷಗಳ ಮೊತ್ತವೆಷ್ಟು? (ಸಾಧಾರಣ)

22. ಐದು ವರ್ಷ ಆರು ತಿಂಗಳು ಮತ್ತು ನಾಲ್ಕು ವರ್ಷ ಒಂಬತ್ತು ತಿಂಗಳು ಇದನ್ನುಕೂಡಿಸಿ .(ಸಾಧಾರಣ)

23. 3 ಗಂಟೆ 15ನಿಮಿಷ 18ಸೆಕೆಂಡ್ ಮತ್ತು 1 ಗಂಟೆ 19ನಿಮಿಷ 17ಸೆಕೆಂಡುಗಳಮೊತ್ತವೆಷ್ಟು? (ಸಾಧಾರಣ)

24. 7ಗಂಟೆ 30ನಿಮಿಷದಿಂದ 5ಗಂಟೆ 10ನಿಮಿಷವನ್ನು ಕಳೆಯಿರಿ .(ಸಾಧಾರಣ)

25. 7 ವರ್ಷ 5 ತಿಂಗಳಿನಿಂದ 4 ವರ್ಷ 11ತಿಂಗಳನ್ನು ಕಳೆಯಿರಿ. (ಸಾಧಾರಣ)

26. ಒಂದು ದಿನದಲ್ಲಿಎಷ್ಟು ಗಂಟೆಗಳು ನಿಮಿಷಗಳು ಮತ್ತು ಸೆಕೆಂಡುಗಳಿವೆ ಎಂಬುದನ್ನು ವಿವರಿಸಿರಿ. (ಸಾಧಾರಣ)

27. ಬೆಳಿಗ್ಗೆ 6ಗಂಟೆಗೆ ಮನೆಯಿಂದ ಹೊರಟ ಮಕ್ಕಳ ಜಾತ ಮಧ್ಯಾಹ್ನ 12ಗಂಟೆಗೆ ತಲುಪಿತು. ಜಾತಾಗೆ ತೆಗೆದುಕೊಂಡ ಸಮಯವೆಷ್ಟು? (ಕಠಿಣ)

28. 1 ಗಂಟೆ 40 ನಿಮಿಷಗಳನ್ನು ಕೇವಲ ಸೆಕೆಂಡುಗಳಲ್ಲಿ ಲೆಕ್ಕಿಸಿ. (ಕಠಿಣ)

29. 10.20ಕ್ಕೆ ಆಟ ಶುರುವಾದದ್ದು 12:50ಕ್ಕೆ ಮುಗಿದರೆ ಆಟದ ಅವಧಿ ಎಷ್ಟು ಲೆಕ್ಕ ಹಾಕಿ. (ಕಠಿಣ)

30. ಶ್ಯಾಮನುಬೆಳಿಗ್ಗೆ 9:00ಗೆ ಕಚೇರಿಗೆ ಬರುತ್ತಾನೆ ,ಕಚೇರಿಯಲ್ಲಿ8 ಗಂಟೆಗಳ ಕಾಲ ಕೆಲಸ ಮಾಡುತ್ತಾನೆ ಹಾಗಾದರೆ ಅವನು ಸಂಜೆ ಕಚೇರಿಯನ್ನು ಬಿಟ್ಟ ವೇಳೆ ಎಷ್ಟು? (ಕಠಿಣ)

31. ಒಂದು ಶಾಲೆಯು ಅರ್ಧ ವಾರ್ಷಿಕ ರಜೆಗಾಗಿ ಅಕ್ಟೋಬರ್ ಮೂರರಂದು ಮುಚ್ಚಿತು ರಜೆಯನಂತರ ಮತ್ತೆ ಅಕ್ಟೋಬರ್ 31ರಂದುತೆರೆಯಿತು ಹಾಗಾದರೆ ಅರ್ಧ ವಾರ್ಷಿಕ ರಜೆಯದಿನಗಳು ಎಷ್ಟು? (ಕಠಿಣ)

32. ಫಾತಿಮಾಳು ಶಾಲೆಯಲ್ಲಿ 5 ಗಂಟೆ 10ನಿಮಿಷ ಅಭ್ಯಾಸ ಮಾಡುತ್ತಾಳೆ ಮನೆಯಲ್ಲಿ 2 ಗಂಟೆ 50ನಿಮಿಷ ಅಭ್ಯಾಸ ಮಾಡುತ್ತಾಳೆ ಹಾಗಾದರೆ ಆ ಒಂದು ದಿನದಲ್ಲಿ ಅವಳು ಅಭ್ಯಾಸ ಮಾಡಿದ ಅವಧಿ ಎಷ್ಟು? (ಕಠಿಣ)

33. ಮಹೇಶನು ದಿನಾಂಕ 3 /10/ 2024 ರಿಂದ 15ದಿನಗಳ ಕಾಲ ರಜೆಯನ್ನುತನ್ನ ಚಿಕ್ಕಪ್ಪನ ಮನೆಯಲ್ಲಿಕಳೆಯುತ್ತಾನೆ.ಹಾಗಾದರೆ ಅವನು ಯಾವ ದಿನಾಂಕದಂದು ಚಿಕ್ಕಪ್ಪನ ಮನೆಯಿಂದಹೊರಡುತ್ತಾನೆ? (ಕಠಿಣ)

ನಾಲ್ಕು ಅಂಕಗಳ ಪ್ರಶ್ನೆಗಳು

34. ಟೈಮ್ ಲೈನ್ ಗಮನಿಸಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. (ಕಠಿಣ)

ಸಮಯ	ಚಟುವಟಿಕೆ

6am	ಎದ್ದು ಬರುವುದು
6:30am	ವ್ಯಾಯಾಮ
7am	ಸ್ನಾನ
7:30am	ಉಪಹಾರ
8am	ಶಾಲೆಗೆ ಹೋಗುವುದು


ಅ. ಎದ್ದು ಬರುವುದರಿಂದ ಶಾಲೆಗೆ ಹೋಗುವವರೆಗೆ ಎಷ್ಟು ಸಮಯ ಕಳೆಯುತ್ತದೆ?

ಆ.ವ್ಯಾಯಾಮವನ್ನು ಎಷ್ಟು ಸಮಯ ಮಾಡಿದಳು?

ಇ. ಸ್ನಾನ ಮತ್ತು ಉಪಹಾರಕ್ಕೆ ಎಷ್ಟು ಸಮಯ ತೆಗೆದುಕೊಂಡಳು?

ಈ.ಚಟುವಟಿಕೆಗಳೆಲ್ಲಾ ಸಂಪೂರ್ಣವಾಗಿ ಎಷ್ಟು ಸಮಯದಲ್ಲಿ ಮುಗಿದವು?

35. ಕೆಳಗಿನ ಗಡಿಯಾರವನ್ನು ನೋಡಿ ಪ್ರಶ್ನೆಗಳಿಗೆ ಉತ್ತರಿಸು. (ಕಠಿಣ)



ಅ.ಗಡಿಯಾರವು ತೋರಿಸುತ್ತಿರುವ ಸಮಯ ಎಷ್ಟು

ಆ.ಇನ್ನೂ 1 ಗಂಟೆ 45 ನಿಮಿಷ ಕಳೆದರೆ ಯಾವ ಸಮಯವಾಗುತ್ತದೆ

ಇ.12pm ನಿಂದ ಈ ಸಮಯದವರೆಗೆ ಎಷ್ಟು ಗಂಟೆ ಆಯಿತು


ಈ. ಹಿಂದಿನ ದಿನ ಈ ಸಮಯದಲ್ಲಿ ನೀನು ಎಲ್ಲಿದ್ದೆ?

36. 6 ಗಂಟೆ 45 ನಿಮಿಷಗಳನ್ನು ಗಡಿಯಾರದಲ್ಲಿ ಸೂಚಿಸಿ. (ಕಠಿಣ)


ಅಧ್ಯಾಯ-18: ಸಮಮಿತಿಯ ಆಕೃತಿಗಳು


ಈಕೆಳಗಿನ ಚಿತ್ರಗಳಲ್ಲಿ ಸಮಮಿತಿ ಆಕೃತಿಯನ್ನು ಗುರುತಿಸಿ, ಮೇಲಿನಿಂದ ಕೆಳಕ್ಕೆ ಸಮಮಿತಿ ಅಕ್ಷ ಎಳೆಯಿರಿ .


(**ಸುಲಭ**)




ಕೆಳಗಿನ ಚಿತ್ರಗಳಲ್ಲಿ ಸಮಮಿತಿ ಆಕೃತಿಯನ್ನು ಗುರುತಿಸಿ, ಎಡದಿಂದ ಬಲಕ್ಕೆ ಸಮಮಿತಿ ಅಕ್ಷ ಎಳೆಯಿರಿ. (**ಸುಲಭ**)

6)



7)


8)



9)



10)



ಈ ಕೆಳಗಿನ ಚಿತ್ರಗಳಲ್ಲಿ ಸಮಮಿತಿ ಆಕೃತಿಗಳಿಗೆ ಚಿತ್ರಗಳ ಕೆಳಗಿರುವ□ನಲ್ಲಿ ✓ ಗುರುತುಹಾಕಿ(**ಸುಲಭ**)


11 


12 


13 


14 


15 

16) 

17) 


18) 

19) 


20) 

ಈ ಕೆಳಗಿನ ಚಿತ್ರಗಳಲ್ಲಿ ಸಮಮಿತಿ ಅಲ್ಲದ ಆಕೃತಿಗಳಿಗೆ ಚಿತ್ರಗಳ ಕೆಳಗಿರುವ □ನಲ್ಲಿ X ಗುರುತುಹಾಕಿ (ಸುಲಭ)

ಬಿಟ್ಟ ಸ್ಥಳ ತುಂಬಿರಿ

21)  **ಈ ಸಮಮಿತಿ ಆಕೃತಿಯಲ್ಲಿರುವ ಸಮಮಿತಿ ಅಕ್ಷಗಳ ಸಂಖ್ಯೆ__________ (ಸುಲಭ)**

22)  **ಈ ಆಕೃತಿಯಲ್ಲಿರುವ ಸಮಮಿತಿ ಅಕ್ಷಗಳ ಸಂಖ್ಯೆ__________ (ಸುಲಭ)**


23)  **ಈ ಚಿತ್ರವನ್ನು ಕನ್ನಡಿಯ ಮುಂದೆ ಹಿಡಿದಾಗ ಉಂಟಾಗುವ ಪ್ರತಿ ಬಿಂಬದ ಚಿತ್ರ __________ (ಸುಲಭ)**

24)  ಈ ಚಿತ್ರವನ್ನು ಕನ್ನಡಿಯ ಮುಂದೆ ಹಿಡಿದಾಗ ಉಂಟಾಗುವ ಪ್ರತಿ ಬಿಂಬದ ಚಿತ್ರ_ _________

(ಸಾಧಾರಣ)


25) ಆಯಾತಾಕಾರದ ಕಾಗದವನ್ನು ಮಧ್ಯದಲ್ಲಿ ಮಡಿಸಿ, ಒಂದು ಆಕೃತಿಯನ್ನು ಕತ್ತರಿಸಿ, ಬಿಡಿಸಿದಾಗ, ಉಂಟಾಗುವ ಆಕೃತಿಯ ಇನ್ನೊಂದು ಆಕೃತಿಯ _________ಆಗಿರುತ್ತದೆ .

(ಸಾಧಾರಣ)



26) ಇದೊಂದು ಸಮಮಿತಿಯ ಆಕೃತಿ ಇದಕ್ಕೆ_________ಸಮಮಿತಿ ಅಕ್ಷವಿದೆ (ಸಾಧಾರಣ).

27) ಸಮಮಿತಿಅಲ್ಲದಆಕೃತಿಗಳಿಗೆ_________ಎಳೆಯಲುಬರುವುದಿಲ್ಲ (ಸಾಧಾರಣ)





28) ಇದರ ಪ್ರತಿಬಿಂಬವನ್ನು ಚಿತ್ರಿಸಿದಾಗ ಉಂಟಾಗುವ ಚಿತ್ರ_________


(ಸಾಧಾರಣ)


VI)ಕೆಳಗಿನ ಚಿತ್ರಗಳಲ್ಲಿ ಗುಂಪಿಗೆ ಸೇರದ ಚಿತ್ರಕ್ಕೆ ✓ ಗುರುತು ಹಾಕಿ

(ಸಾಧಾರಣ)







29) 

30) 

31) 

32) 

VII)ಕೆಳಗೆ ಕೆಲವು ಸಮಮಿತಿಯ ಆಕೃತಿಗಳ ಅರ್ಧಭಾಗವನ್ನು ನೀಡಲಾಗಿದೆ.
ಉಳಿದ ಅರ್ಧ ಭಾಗವನ್ನು ಚಿತ್ರಿಸಿ ಪೂರ್ಣಗೊಳಿಸಿ (ಸಾಧಾರಣ)

33) 
34) 
35) 
36) 
37) 
38) 

VIII)

39) ½ ಸುತ್ತು ತಿರುಗಿಸಿದಾಗ ಆಕಾರ ಬದಲಾಗದ ಆಂಗ್ಲಭಾಷೆಯ ದೊಡ್ಡ (Capital) ಅಕ್ಷರಗಳನ್ನು ಪಟ್ಟಿ ಮಾಡಿ

(ಸಾಧಾರಣ)

40) ಆಂಗ್ಲಭಾಷೆಯಯಾವದೊಡ್ಡಅಕ್ಷರವನ್ನು ¼ ಸುತ್ತುತಿರುಗಿಸಿದಾಗಇನ್ನೊಂದುಅಕ್ಷರಸಿಗುತ್ತದೆ ? ಆಕೃತಿಬಿಡಿಸು (ಸಾಧಾರಣ)

41) ½ ಸುತ್ತು ತಿರುಗಿದ ನಂತರ ಮೊದಲಿನಂತೆ ಕಾಣುವ ಆಕೃತಿಗಳ ಚಿತ್ರಬಿಡಿಸಿ (ಸಾಧಾರಣ)

42) ¼ ಸುತ್ತುತಿರುಗಿದ ನಂತರ ಮೊದಲಿನಂತೆ ಕಾಣುವ ಆಕೃತಿಗಳ ಚಿತ್ರಬಿಡಿಸಿ **(**ಸಾಧಾರಣ**)**

43) 1/3 ಸುತ್ತುತಿರುಗಿದ ನಂತರ ಮೊದಲಿನಂತೆ ಕಾಣುವ ಆಕೃತಿಗಳ ಚಿತ್ರಬಿಡಿಸಿ (**ಕಠಿಣ**)

IX) (**ಕಠಿಣ**)

44) ಒಬ್ಬ ಹುಡುಗ ಬೋರ್ಡನ ಎದುರು ನೇರವಾಗಿ ನಿಂತು ನೋಡುತ್ತಾನೆ. 6666 ಇನ್ನೊಬ್ಬ ಶೀರ್ಷಾಸನ ಹಾಕಿ ಅದೇ ಬೋರ್ಡನ್ನು ನೋಡುತ್ತಾನೆ. ಇಬ್ಬರೂ ಆ ಬೋರ್ಡನ್ನು ಹೇಗೆ ಓದುತ್ತಾರೆ ತಿಳಿಸಿ.



X) ನೀವು ನಿಮ್ಮ ಸುತ್ತಮುತ್ತ ನೋಡಿರುವ 8 ಸಮಮಿತಿ ಆಕೃತಿಗಳನ್ನು ಪಟ್ಟಿ ಮಾಡಿ (**ಕಠಿಣ**)

45) 1)
2)
3)
4)
5)
6)
7)
8)

XI) ನೀವು ನಿಮ್ಮ ಸುತ್ತಮುತ್ತ ನೋಡಿರುವ 8 ಸಮಮಿತಿ ಅಲ್ಲದ ಆಕೃತಿಗಳನ್ನು ಪಟ್ಟಿ ಮಾಡಿ (**ಕಠಿಣ**)

46) 1)
2)
3)
4)
5)

7)
8)

XII) ರಟ್ಟಿನಲ್ಲಿ ಆಯತ, ಲಂಬಕೋನ, ತ್ರಿಭುಜ ಮತ್ತು 4 ವೃತ್ತಾಕೃತಿಗಳನ್ನು ಕತ್ತರಿಸಿ ಚಿತ್ರದಲ್ಲಿ ತೋರಿಸಿರುವಂತೆ ಅವುಗಳಿಗೆ ಕಡ್ಡಿಗಳನ್ನು ಜೋಡಿಸಿ ಅಂಗೈಗಳ ಮಧ್ಯೆ ಕಡ್ಡಿಯನ್ನು ಇರಿಸಿ ಕಡ್ಡಿಯನ್ನು ಜೋರಾಗಿ ತಿರುಗಿಸಿದಾಗ ಉಂಟಾಗುವ ಘನಾಕೃತಿಗಳನ್ನು ಬಿಡಿಸಿ ಹೆಸರಿಸಿ (ಸಾಧಾರಣ)


XIII) ಕೆಳಗಿನ ಪಟ್ಟಿಯಲ್ಲಿ ಮೇಲ್ಭಾಗದಲ್ಲಿ ಕೆಲವು ಚಿತ್ರಗಳನ್ನು ನೀಡಲಾಗಿದೆ. ಬಲಭಾಗದಲ್ಲಿ ಆಕೃತಿಯನ್ನು ತಿರುಗಿಸುವ ಪ್ರಮಾಣವನ್ನುನೀಡಲಾಗಿದೆ. ಆಪ್ರಮಾಣದಲ್ಲಿ ಆಕೃತಿಯನ್ನು ತಿರುಗಿಸಿದಾಗ ಅದು ಮೊದಲಿನಂತೆ ಕಂಡರೆ ✓ ಚಿಹ್ನೆಯಿಂದಲೂ, ಮೊದಲಿನಂತರ ಕಾಣದಿದ್ದರೆ X ಚಿಹ್ನೆಯಿಂದಲೂಸೂಚಿಸಿ. (ಕಠಿಣ)

50)

ಆಕೃತಿ / ಸುತ್ತು	■	▬	●	▲	⬢	⬟	W	8				
$\frac{1}{2}$ ಸುತ್ತು	✓											
$\frac{1}{3}$ ಸುತ್ತು	x											
$\frac{1}{4}$ ಸುತ್ತು	✓											
$\frac{1}{6}$ ಸುತ್ತು	x											

ಅಧ್ಯಾಯ: 19.ಮೂರು ಆಯಾಮದ ಆಕೃತಿಗಳು

1 ಅಂಕದ ಬಹು ಆಯ್ಕೆ ಪ್ರಶ್ನೆಗಳು



1.  ಈ ವಸ್ತುವನ್ನು ಹೋಲುವ ಮೂರು ಆಯಾಮದ ರೇಖಾಕೃತಿ ಹೆಸರು (**ಸುಲಭ**)
   A)ಆಯತ ಘನ B) ಸ್ತಂಭಾಕೃತಿ C) ಚೌಕ ಘನ D)ಶಂಕು
2.  ಈ ವಸ್ತುವನ್ನು ಹೋಲುವ ಮೂರು ಆಯಾಮದ ರೇಖಾಕೃತಿ (**ಸುಲಭ**)
   A) ಆಯತ ಘನ B) ಶಂಕು C) ಸ್ತಂಭಾಕೃತಿ D) ಚೌಕ ಘನ
3.  ಈ ವಸ್ತುವನ್ನು ಹೋಲುವ ಮೂರು ಆಯಾಮದ ರೇಖಾಕೃತಿ **ಸುಲಭ**)
   A) ಶಂಕು B) ಆಯತಘನ C) ಚೌಕಘನ D)ಸ್ತಂಭಾಕೃತಿ
4.  ಈ ವಸ್ತುವನ್ನು ಹೋಲುವ ಮೂರು ಆಯಾಮದ ರೇಖಾಕೃತಿ (**ಸುಲಭ**)
   A) ಆಯತಘನ B)ಸ್ತಂಭಾಕೃತಿ C) ಶಂಕು D)ಚೌಕಘನ
5. ಘನದ ಮುಖಗಳು ಈ ಆಕಾರದಲ್ಲಿದೆ **ಸುಲಭ**)
   A) ಆಯತ B)ಚೌಕ C) ತ್ರಿಭುಜ D)ವೃತ್ತ


1 ಅಂಕದ ಬಿಟ್ಟ ಸ್ಥಳ ಪ್ರಶ್ನೆಗಳು .


6. ಚೌಕ ಘನಕ್ಕೆ ಇರುವ ಮೇಲ್ಮೈಗಳ ಸಂಖ್ಯೆ............... (**ಸುಲಭ**)
7. ಆಯತ ಘನಕ್ಕೆ ಇರುವ ಮೇಲ್ಮೈಗಳ ಸಂಖ್ಯೆ.............. (**ಸುಲಭ**)
8. ಸ್ತಂಭಾಕೃತಿಗೆ ಇರುವ ಮೇಲ್ಮೈಗಳ ಸಂಖ್ಯೆ................ (**ಸುಲಭ**)
9. ಶಂಕುವಿಗೆ ಇರುವ ಮೇಲ್ಮೈಗಳ ಸಂಖ್ಯೆ.................. (**ಸುಲಭ**)
10. ಚೌಕ ಘನಕ್ಕೆ ....ಅಂಚುಗಳಿವೆ (**ಸುಲಭ**)
11. ಆಯುತ ಘನಕ್ಕೆ..........ಅಂಚುಗಳಿವೆ (**ಸುಲಭ**)
12. ಶಂಕುವಿಗೆ............ ಅಂಚುಗಳಿವೆ (**ಸುಲಭ**)
13. ಸ್ತಂಭಾಕೃತಿಗೆ................ ಅಂಚುಗಳಿವೆ (**ಸುಲಭ**)
14. ಚೌಕ ಘನಕ್ಕೆ ಇರುವ ಶೃಂಗಗಳ ಸಂಖ್ಯೆ........... (**ಸುಲಭ**)
15. ಆಯತ ಘನಕ್ಕೆ ಇರುವ ಶೃಂಗಗಳ ಸಂಖ್ಯೆ......... (**ಸುಲಭ**)
16. ಸ್ತಂಭಾಕೃತಿಗೆ ಇರುವ ಶೃಂಗಗಳ ಸಂಖ್ಯೆ........... (**ಸುಲಭ**)
17. ಶಂಕುವಿಗೆ ಇರುವ ಶೃಂಗಗಳ ಸಂಖ್ಯೆ.......... (**ಸುಲಭ**)
18. ಸಂಭಾಕೃತಿಯಲ್ಲಿರುವ ವೃತ್ತಾಕಾರದ ಮುಖಗಳ ಸಂಖ್ಯೆ.......... (**ಸುಲಭ**)
19. ಶಂಕುವಿಗೆ ಇರುವ ವೃತ್ತಾಕಾರದ ಮುಖಗಳ ಸಂಖ್ಯೆ......... . (**ಸುಲಭ**)
20. ಚಿತ್ರಿಸಿದ ಘನಾಕೃತಿಯಲ್ಲಿ ಕಾಣುವ ಅಂಚುಗಳನ್ನು .... ರೇಖೆಯಿಂದ ಸೂಚಿಸುತ್ತಾರೆ. (**ಸುಲಭ**)
21. ಚಿತ್ರಿಸಿದ ಘನಾಕೃತಿಯಲ್ಲಿ ಕಾಣದ ಅಂಚುಗಳನ್ನು .... ರೇಖೆಯಿಂದ ಸೂಚಿಸುತ್ತಾರೆ. (**ಸುಲಭ**)

1 ಅಂಕದ ಹೊಂದಿಸಿ ಬರೆಯುವ ಪ್ರಶ್ನೆಗಳು

'ಅ' ಪಟ್ಟಿ 'ಬ'ಪಟ್ಟಿ


22   (ಸಾಧಾರಣ)


23   (ಸಾಧಾರಣ)


24   (ಸಾಧಾರಣ)

25  ((ಸಾಧಾರಣ))

ಘನಾಕೃತಿಗೆ ಸರಿಹೊಂದುವ ಚಿತ್ರದ ಎದುರು ಸರಿ ಚಿಹ್ನೆಯನ್ನು ಸರಿ ಹೊಂದದ ಚಿತ್ರದ ಎದುರು ತಪ್ಪು ಚಿಹ್ನೆ ಹಾಕುವ 1ಅಂಕದ ಪ್ರಶ್ನೆಗಳು (**ಸುಲಭ**)

26 

27 

28 

29 

2 ಅಂಕದ ಪ್ರಶ್ನೆಗಳು

30 ಆಯತ ಘನಕ್ಕೆ ನಾಲ್ಕು ಉದಾಹರಣೆ ತಿಳಿಸಿ. (**ಸುಲಭ**)

31 .ಚೌಕ ಘನಕ್ಕೆ ನಾಲ್ಕು ಉದಾಹರಣೆ ತಿಳಿಸಿ. (**ಸುಲಭ**)

32 ಸ್ತಂಭಾಕೃತಿಗೆ ನಾಲ್ಕು ಉದಾಹರಣೆ ತಿಳಿಸಿ. (**ಸುಲಭ**)


33 ಶಂಕುವಿಗೆ ನಾಲ್ಕು ಉದಾಹರಣೆ ತಿಳಿಸಿ .(ಸುಲಭ)

34 ಶಂಕುವಿನಲ್ಲಿರುವ ಸಮತಲ ಮೇಲ್ಮೈ ಮತ್ತು ವಕ್ರ ಮೇಲ್ಮೈಗಳ ಸಂಖ್ಯೆ ತಿಳಿಸಿರಿ .(ಸಾಧಾರಣ)

35 ಸ್ತಂಭಾಕೃತಿಯಲ್ಲಿರುವ ಸಮತಲ ಮತ್ತು ವಕ್ರಮೇಲ್ಮೈಗಳ ಸಂಖ್ಯೆ ತಿಳಿಸಿ. (ಸಾಧಾರಣ)

36 ಘನ ಆಕೃತಿಗಳನ್ನು ಬಳಸಿ ರಚಿಸಲಾದ ರೋಬೋಟ ಚಿತ್ರ ನೀಡಲಾಗಿದೆ ಇದರಲ್ಲಿರುವ ಮೂರು ಆಯಾಮದ ಆಕೃತಿಗಳನ್ನು ಪತ್ತೆ ಹಚ್ಚಿ ಹೆಸರಿಸಿ ಮತ್ತು ಪ್ರತಿಯೊಂದು ಎಷ್ಟು ಸಲ ಬಳಸಲಾಗಿದೆ ಎಂದು ಬರೆಯಿರಿ

(ಕಠಿಣ)



3 ಅಂಕದ ಪ್ರಶ್ನೆಗಳು

37 ಒಂದು ಘನಾಕೃತಿಯನ್ನು ಎಷ್ಟು ನೋಟಗಳಲ್ಲಿ ಕಾಣಬಹುದು? ಅವು ಯಾವವು? (ಕಠಿಣ)

38 ಚೌಕ ಘನ, ಘನಾಕೃತಿಯ ಮುಂಭಾಗದ ನೋಟ, ಪಾರ್ಶ್ವನೋಟ, ಮೇಲ್ಭಾಗದ ನೋಟ 2ಡಿ ಚಿತ್ರ ರಚಿಸಿ. (ಕಠಿಣ)

39 ಆಯತ ಘನ ,ಘನಾಕೃತಿಯ ಮುಂಭಾಗದ ನೋಟ, ಪಾರ್ಶ್ವ ನೋಟ ,ಮೇಲ್ಭಾಗದ ನೋಟ 2ಡಿ ಚಿತ್ರ ರಚಿಸಿ (ಕಠಿಣ)

40 ಸ್ತಂಭಾಕೃತಿಯ ಮುಂಭಾಗದ ನೋಟ ,ಪಾರ್ಶ್ವನೋಟ, ಮುಂಭಾಗದ ನೋಟದ 2ಡಿ ಚಿತ್ರ ರಚಿಸಿ (ಕಠಿಣ)

41 ಶಂಕು ಘನಾಕೃತಿಯ ಮುಂಭಾಗದ ನೋಟ, ಪಾರ್ಶ್ವನೋಟ, ಮೇಲ್ಭಾಗದನೋಟದ 2ಡಿ ಚಿತ್ರ ರಚಿಸಿ (ಕಠಿಣ)

42ನೀಡಿದ ಮೆಟ್ಟಿಲಿನ ಚಿತ್ರದಲ್ಲಿ ಮುಂಭಾಗದ ನೋಟ, ,ಪಾರ್ಶ್ವನೋಟ ಮತ್ತು ಮೇಲ್ಭಾಗದ ನೋಟವನ್ನ ಹೆಸರಿಸಿ. (ಕಠಿಣ)

ಅಂಕದ ಪ್ರಶ್ನೆಗಳು
ನಾಕೃತಿಯನ್ನು ಎಷ್ಟು ನೋಟಗಳಲ್ಲಿ ಕಾಣಬಹುದು?
ಘನಾಕೃತಿಯ ಮುಂಭಾಗದ ನೋಟ, ಪಾರ್ಶ್ವನೋಟ


4 ಅಂಕದ ಪ್ರಶ್ನೆಗಳು

43 ಆಯತಘನ, ಚೌಕಘನ, ಸ್ತಂಭಾಕೃತಿ ಮತ್ತು ಶಂಕುವಿನ ಚಿತ್ರ ರಚಿಸಿರಿ (ಸಾಧಾರಣ)

44 ಚೌಕಘನ, ಆಯತಘನ, ಸ್ತಂಭಾಕೃತಿ ಮತ್ತು ಶಂಕುವಿನ ಮೇಲ್ಮೈ ಲಕ್ಷಣ ತಿಳಿಸಿರಿ. (ಸಾಧಾರಣ)

45 ನಿಗದಿತ ಜಾಲಾಕೃತಿಗಳಿಂದ ಮೂರು ಆಯಾಮದ ಆಕೃತಿ ರಚಿಸಿ (ಕಠಿಣ)

ದ ಮೆಟ್ಟಿಲಿನ ಚಿತ್ರದಲ್ಲಿ ಮುಂಭಾಗದ ನೋಟ ಪಾರ್ಶ್ವ



4 ಅಂಕದ ಪ್ರಶ್ನೆಗಳು

ಅಧ್ಯಾಯ – 20ವಿನ್ಯಾಸಗಳು

ಒಂದು ಅಂಕದ ಪ್ರಶ್ನೆಗಳು

ಕೆಳಗಿನ ಸಂಖ್ಯಾ ಮಾದರಿಗಳನ್ನು ಗಮನಿಸಿ ಮುಂದಿನ 2 ಸಂಖ್ಯೆಗಳನ್ನುಬರೆಯಿರಿ (ಸುಲಭ)

1) 1, 3, 5, 7 ___, ___

2)5, 10, 15, 20 ___, ___

3)13, 15, 18, 20, 23, ___, ___

4)21, 20, 19, 18, ___, ___

5)35, 30, 25, 20, ___, ___

ಎರಡು ಅಂಕದ ಪ್ರಶ್ನೆಗಳು **(ಸುಲಭ)**

6) ತ್ರಿಭುಜ ಸಂಖ್ಯೆಗಳ ಸರಣಿಯ ಪ್ರಾರಂಭವನ್ನು ಕೆಳಗೆ ಕೊಡಲಾಗಿದೆ. ಬಿಟ್ಟ ಜಾಗ ಭರ್ತಿ ಮಾಡಿ.

1, 3, 6, 10, _______, ______, ________, 36, 45,

7)ವರ್ಗಸಂಖ್ಯೆಗಳ ಸರಣಿಯ ಪ್ರಾರಂಭವನ್ನು ಕೆಳಗೆ ಕೊಡಲಾಗಿದೆ. ಬಿಟ್ಟ ಜಾಗ ಭರ್ತಿಮಾಡಿ.

1, 4, 9, 16, ______, _______, ______, 64, 81

ಮೂರುಅಂಕದಪ್ರಶ್ನೆಗಳು

8) ಮೊದಲ ನಾಲ್ಕು ತ್ರಿಭುಜ ಸಂಖ್ಯೆಗಳನ್ನು ಬರೆಯಿರಿ, ಚುಕ್ಕಿ ಚಿತ್ರದಿಂದ ಸೂಚಿಸಿರಿ . (ಸಾಧಾರಣ)


9)ಮೊದಲ ನಾಲ್ಕು ವರ್ಗ ಸಂಖ್ಯೆಗಳನ್ನು ಬರೆಯಿರಿ. ಚುಕ್ಕಿ ಚಿತ್ರದಿಂದ ಸೂಚಿಸಿರಿ . (ಸಾಧಾರಣ)

10) ಕೆಳಗೆ ಕೊಟ್ಟಿರುವ ಸಂಖ್ಯಾ ವಿನ್ಯಾಸಗಳನ್ನು ಗಮನಿಸಿ ಬಿಟ್ಟ ಸ್ಥಳ ತುಂಬಿರಿ. (ಸಾಧಾರಣ)


1 + 2 + 1 = 4

1 + 2 + 3 + 2 + 1 = 9

1 + 2 + 3 + 4 + 3 + 2 + 1 = 16




11. ಕೆಳಗಿನ ಅಂಚಿನ ವಿನ್ಯಾಸವನ್ನು ಪೂರ್ಣಗೊಳಿಸಿರಿ. (ಸಾಧಾರಣ)



12. ಕೆಳಗಿನ ಪಟ್ಟಿಯನ್ನು ಗಮನಿಸಿ ತ್ರಿಭುಜ ಸಂಖ್ಯೆಗಳಿಗೆ ವೃತ್ತ ಹಾಕಿ ವರ್ಗ ಸಂಖ್ಯೆಗಳಿಗೆ ಚೌಕ ಹಾಕಿ ಕೊಟ್ಟಿರುವ ಕೋಷ್ಟಕದಲ್ಲಿ ಭರ್ತಿಮಾಡಿ . .(ಕಠಿಣ)

7 ರಮಗ್ಗಿ	ತ್ರಿಭುಜ ಸಂಖ್ಯೆಗಳು	ವರ್ಗ ಸಂಖ್ಯೆಗಳು
7 x 1 = 7		
7 x 2 = 14		
7 x 3 = 21		
7 x 4 = 28		
7 x 5 = 35		
7 x 6 = 42		
7 x 7 = 49		
7 x 8 = 56		
7 x 9 = 63		
7 x 10 = 70		

13. ಬಿಟ್ಟಿರುವ ಬೆಸ ಸಂಖ್ಯೆಗಳನ್ನು ಭರ್ತಿಮಾಡಿರಿ ಮತ್ತು ವರ್ಗ ಸಂಖ್ಯೆಗಳನ್ನು ವೃತ್ತದಲ್ಲಿ ಬರೆಯಿರಿ (ಕಠಿಣ)



ನಾಲ್ಕುಅಂಕದ ಪ್ರಶ್ನೆಗಳು

14)1 ರಿಂದ 50ರ ವರೆಗಿನ ಸಂಖ್ಯೆಗಳನ್ನು ಬರೆಯಿರಿ. ವರ್ಗ ಸಂಖ್ಯೆಗಳಿಗೆ ಕೆಂಪು ಬಣ್ಣ ಹಚ್ಚಿರಿ. ತ್ರಿಭುಜ ಸಂಖ್ಯೆಗಳಿಗೆ ನೀಲಿ ಬಣ್ಣ ಹಚ್ಚಿರಿ. (ಕಠಿಣ)

1	2								
									50

ಅ). 1 ರಿಂದ 50ರ ವರೆಗಿನ ವರ್ಗ ಸಂಖ್ಯೆಗಳನ್ನು ಬರೆಯಿರಿ

ಆ). 1 ರಿಂದ 50ರ ವರೆಗಿನ ತ್ರಿಭುಜ ಸಂಖ್ಯೆಗಳನ್ನು ಬರೆಯಿರಿ

15) ಕೆಳಗೆ ಕೊಟ್ಟಿರುವ ವರ್ಗ ಸಂಖ್ಯೆಗಳನ್ನು ಅನುಕ್ರಮ ಬೆಸ ಸಂಖ್ಯೆಗಳ ಮೊತ್ತದ ರೂಪದಲ್ಲಿ ವ್ಯಕ್ತಪಡಿಸಿರಿ. .(ಕಠಿಣ)

4, 9, 16, 36

****

ಉತ್ತರಸೂಚಿ

ಅಧ್ಯಾಯ 1 - 5 ಅಂಕೆಯ ಸಂಖ್ಯೆಗಳು

ಸೂಕ್ತ ಉತ್ತರ ಆರಿಸಿಬರೆದಿದೆ (ಒಂದು ಅಂಕದ ಪ್ರಶ್ನೆಗಳು)

1. **C. 7**
2. **B. 90000**
3. **C. 6**
4. **A. 12,345**
5. **B. 65478**
6. **B =**
7. **D. 1**

ಬಿಟ್ಟ ಸ್ಥಳ ತುಂಬಿರಿ(ಒಂದು ಅಂಕದ ಪ್ರಶ್ನೆಗಳು)

8. **1 X 10000 + 8 X 1000 + 3 X 100 + 0X 10 + 2 X 1**
9. **75383**
10. **ಮೂವತ್ತೈದು ಸಾವಿರದ ನಾಲ್ಕು ನೂರಾ ಹನ್ನೆರಡು**
11. **20,435**
12. **18,347**

ಹೊಂದಿಸಿ ಬರೆಯಿರಿ(ಒಂದು ಅಂಕದ ಪ್ರಶ್ನೆಗಳು)

ಅ	ಬ
13. 61.000 ಇದರ ಹಿಂದಿನ ಸಂಖ್ಯೆ	**60,999**
14. 59.999 ಇದರ ಮುಂದಿನ ಸಂಖ್ಯೆ	**60,000**
15. ಐದಂಕಿಯ ಅತಿ ಚಿಕ್ಕ ಸಂಖ್ಯೆ	**10000**
16. 78,654 ಇದರಲ್ಲಿ 8 ರ ಸ್ಥಾನ ಬೆಲೆ	**8,000**
17. ಐದಂಕಿಯ ಅತಿ ದೊಡ್ಡ ಸಂಖ್ಯೆ	**99999**

ಕೆಳಗಿನ ಸಂಖ್ಯೆಗಳನ್ನು ಸಂಖ್ಯಾರೂಪದಲ್ಲಿ ಬರೆಯಿರಿ.(ಒಂದುಅಂಕದಪ್ರಶ್ನೆಗಳು)

18. – **47,048**
19. - **13,894**

ಕೆಳಗಿನ ಸಂಖ್ಯೆಗಳನ್ನು ಪದಗಳಲ್ಲಿ ಬರೆಯಿರಿ(ಒಂದು ಅಂಕದ ಪ್ರಶ್ನೆಗಳು)

20. ಆರವತ್ತೇಳು ಸಾವಿರದ ಮೂರು ನೂರಾ ತೊಂಬತ್ತಾಲ್ಕು

21. ಇಪ್ಪತ್ತನಾಲ್ಕು ಸಾವಿರದ ಆರು

ಸಂಖ್ಯೆಗಳನ್ನುಹೋಲಿಸಿ ಮಧ್ಯದಲ್ಲಿ < , > , = ಚಿನ್ಹೆಯನ್ನು ಬರೆಯಿರಿ(ಒಂದುಅಂಕದಪ್ರಶ್ನೆಗಳು)

22. **26,852 [>] 26,342**

23. **35,728 [=] 35,728**

24. **87,875 [<] 89,361**

ಅಡಿಗೆರೆ ಎಳೆದಿರುವ ಸಂಖ್ಯೆಯ ಸ್ಥಾನ ಬೆಲೆ ಮತ್ತು ಮುಖ ಬೆಲೆ ಬರೆಯಿರಿ.(ಎರಡುಅಂಕದಪ್ರಶ್ನೆಗಳು)

25. 82471 ಇದರಸ್ಥಾನಬೆಲೆ **2,000** ಮುಖಬೆಲೆ **2**

26. 78947 ಇದರಸ್ಥಾನಬೆಲೆ **7** ಮುಖಬೆಲೆ **7**

ಕೆಳಗಿನ ಸಂಖ್ಯೆಗಳನ್ನು ಸ್ಥಾನಬೆಲೆ ಕೋಷ್ಟಕದಲ್ಲಿ ಬರೆಯಿರಿ(ಎರಡುಅಂಕದಪ್ರಶ್ನೆಗಳು)

ಹತ್ತುಸಾವಿರ	ಸಾವಿರ	ನೂರು	ಹತ್ತು	ಬಿಡಿ
6	**5**	**0**	**0**	**0**

27. **65000**

76809

ಹತ್ತುಸಾವಿರ	ಸಾವಿರ	ನೂರು	ಹತ್ತು	ಬಿಡಿ
7	**6**	**8**	**0**	**9**

ಕೆಳಗಿನ ಸಂಖ್ಯೆಗಳನ್ನು ಸ್ಥಾನ ಬೆಲೆಗನುಗುಣವಾಗಿ ಮಣಿಕಟ್ಟಿನಲ್ಲಿ ಚಿತ್ರಿಸಿ


(ಪ್ರಶ್ನೆ ಪತ್ರಿಕೆಯಲ್ಲಿ ಒಂದು ಮಣಿಕಟ್ಟಿನ ಚಿತ್ರ


ಮಾದರಿಯಾಗಿ ನೀಡಿದ್ದು ಉತ್ತರಿಸುವಾಗ ಪ್ರತಿ ಉತ್ತರಕ್ಕೆ ಪ್ರತ್ಯೇಕ ಮಣಿಕಟ್ಟನ್ನು ರಚಿಸಿಕೊಳ್ಳಿ)

(ಎರಡುಅಂಕದಪ್ರಶ್ನೆಗಳು)

28. **25361**

29. **36052**





52. 2 5 3 6 1 53. 3 6 0 5 2

ಕೊಟ್ಟಿರುವಸಂಖ್ಯೆಯಹಿಂದಿನಮುಂದಿನಸಂಖ್ಯೆಬರೆಯಿರಿ(ಎರಡುಅಂಕದಪ್ರಶ್ನೆಗಳು)

ಹಿಂದಿನಸಂಖ್ಯೆಸಂಖ್ಯೆಮುಂದಿನಸಂಖ್ಯೆ

30. **93784 93,785 93,786**

31. **81,376 81,377 81,378**

32. **42,784 42,785 42,786**

ಇಳಿಕೆ ಕ್ರಮದಲ್ಲಿ ಬರೆಯಿರಿ(ಮೂರು ಅಂಕದ ಪ್ರಶ್ನೆಗಳು)

33. **ಇಳಿಕೆ ಕ್ರಮ 54,786 43,765 32,654 21,435**

34. **ಇಳಿಕೆ ಕ್ರಮ77,777 70,777 70,770 70,077**

ಏರಿಕೆ ಕ್ರಮದಲ್ಲಿ ಬರೆಯಿರಿ.(ಮೂರು ಅಂಕದ ಪ್ರಶ್ನೆಗಳು)

35. **ಏರಿಕೆಕ್ರಮ40,444 44,014 44,044 44,444**

36. **ಏರಿಕೆಕ್ರಮ33,148 33,184 33,481 33,814**

ಕೆಳಗಿನ ಸಂಖ್ಯೆಗಳನ್ನು ವಿಸ್ತರಣಾ ರೂಪದಲ್ಲಿ ಬರೆಯಿರಿ.(ಮೂರು ಅಂಕದ ಪ್ರಶ್ನೆಗಳು)

37. **95,361 = 9X10,000 + 5X1,000 + 3X100 +6X10+ 1 X1**

38. **20,005 = 2X10,000 + 0X1,000 + 0X100 +0X10+ 5 X1**

ಕೆಳಗಿನ ಸಂಖ್ಯೆಗಳನ್ನು ಸಂಕ್ಷಿಪ್ತ ರೂಪದಲ್ಲಿ ಬರೆಯಿರಿ.(ಮೂರು ಅಂಕದ ಪ್ರಶ್ನೆಗಳು)

39. **2X10,000 + 3X1,000 + 0X100 +4X10+ 5 X1**

= 20,000+3,000+100+40+5

= 23,045

40. **7 X10,000 + 2X1,000 + 3X100 + 5X10+ 4 X1**

= 70,000+2,000+300+4

= 72,354

ಸಂಖ್ಯಾ ಸರಣಿ ವಿನ್ಯಾಸ ಗುರುತಿಸಿ ಪೂರ್ಣಗೊಳಿಸಿರಿ.(ಮೂರು ಅಂಕದ ಪ್ರಶ್ನೆಗಳು)

41. **88,888 78,888 68,888 58,888 48,888**

42. **23,344 23,444 23,544 23,644 23,744**

43. **58,600 62,600 66,600 70,600 74,600**

ಸ್ಥಾನ ಬೆಲೆ ಕೋಷ್ಟಕದಲ್ಲಿ ಚಿತ್ರ ರೂಪದಲ್ಲಿ ಬರೆಯಿರಿ(ಮೂರು ಅಂಕದ ಪ್ರಶ್ನೆಗಳು)

44. 11,243

ಹತ್ತುಸಾವಿರ	ಸಾವಿರ	ನೂರು	ಹತ್ತು	ಬಿಡಿ
1	1	2	4	3
★	★	★★	★★★★	★★★

45. 45,642

ಹತ್ತುಸಾವಿರ	ಸಾವಿರ	ನೂರು	ಹತ್ತು	ಬಿಡಿ
4	5	6	4	2
★★★★	★★★★★	★★★★★★	★★★★	★★

ಕೆಳಗಿನ ಸಮಸ್ಯೆಗಳನ್ನು ಬಿಡಿಸಿರಿ.(ನಾಲ್ಕು ಅಂಕದ ಪ್ರಶ್ನೆಗಳು)

46. ದೀಪಿಕಾಳ ತೋಟದಲ್ಲಿ ಈ ವರ್ಷ ಬೆಳೆಗಳ ಸಂಖ್ಯಾವಾರು

ಏರಿಕೆಕ್ರಮ : 20,150 36,468 44,350 86,756 96,867

ಪೇರಲ ಹಣ್ಣು , ನುಗ್ಗೆಕಾಯಿ, ದಾಳಿಂಬೆಹಣ್ಣು, ಮಾವಿನಹಣ್ಣು, ತೆಂಗಿನಕಾಯಿ

ಇಳಿಕೆಕ್ರಮ ; 96,867 86,756 44,350 36,468 20,150

ತೆಂಗಿನಕಾಯಿ ಮಾವಿನಹಣ್ಣು ದಾಳಿಂಬೆಹಣ್ಣು ನುಗ್ಗೆಕಾಯಿ ಪೇರಲಹಣ್ಣು

47. ಕ್ರಿಕೆಟ ಆಟದಲ್ಲಿ 2024-25 ನೇ ವಿವಿಧ ವಿದ್ಯಾರ್ಥಿಗಳು ವರ್ಷದಲ್ಲಿ ಗಳಿಸಿದ ರನ್ ಗಳು

ಏರಿಕೆ ಕ್ರಮ : 22,32734 , 32740, 31852 ,32763 457


ಗಣಪತಿ ಆಯುಷ್ ಭರತ ನಾಗರಾಜ ಆರ್ಯನ್

ಇಳಿಕೆ ಕ್ರಮ : 63,457 52,327 40,318 34,327 22,327


ಆರ್ಯನ್ ನಾಗರಾಜ ಭರತ ಆಯುಷ್ ಗಣಪತಿ


48. ನೀಡಿರುವ ಸಂಖ್ಯೆಗಳನ್ನು ಏರಿಕೆ ಮತ್ತು ಇಳಿಕೆ ಕ್ರಮದಲ್ಲಿ ನೀಡಿರುವ ಮೆಟ್ಟಿಲುಗಳಲ್ಲಿ ತುಂಬಿರಿ.


28,769 63,470 11,355 45,220 88,888




49. ಕೆಳಗಿನ ಪ್ರತಿಚಿತ್ರವನ್ನು ಸೂಕ್ಷ್ಮವಾಗಿ ಗಮನಿಸಿ ಪ್ರತಿ ಚಿತ್ರದಲ್ಲಿನ ಅಂಕೆಗಳಿಂದ ಗರಿಷ್ಠ ಮತ್ತು ಕನಿಷ್ಠ ಸಂಖ್ಯೆಗಳನ್ನು ಬರೆಯಿರಿ.









ಗರಿಷ್ಠ ಸಂಖ್ಯೆ	**65,432**	**97,654**	**97,643**	**87,531**
ಕನಿಷ್ಠ ಸಂಖ್ಯೆ	**23,456**	**45,679**	**34,643**	**13531**

ಅಧ್ಯಾಯ **2:** ಸಂಕಲನ

ಉತ್ತರಗಳು

1 a)50,000
2 b) 52,000
3 c) 30,000
4 d) 20,000
5 b) 43,000
II) 6) 1,000
7) 500
8) 3,000
9) 2,000
10) 900
11) 4,000
12) e) 40,000
13) c) 60,000
14) b) 62,000
15) f) 30,200
16 d) 28,500
17) a) 50,600
III) 18) 36417+32,532=68949
19) 28,490+61,306=89796
20) 12,973+46,016=58,989
21) 23,462+52,304=75766
22) 42806+34,063=76,869
23) 18,202+11,304=29,506
24) 52,320+10,000=62,320
25) 12,432+34,131=46,563
26) 12,403+13,524= 25,927
27) 40,000+34,269=74,269

28) 36,907+53613=90,520

29) 24596+36578=61,174

30) 43,374+36,634=80,008

31) 25,700+2246+16,413=44,359

32) 60,000+24,00+28,500=90,900

33) 34,000+4,000+12,000=50,000

34) 9000+12000+3000=24,000

35) 11,000+2900+3900=17,800

36) 16,000+25666+14729=56395

37) 15000+66,666+10,000=91,666

IV ಸಮಸ್ಯೆ ಲೆಕ್ಕದ ಉತ್ತರಗಳು

38) ಒಂದು ಹಳ್ಳಿಯ ಜನಸಂಖ್ಯೆ 12,389
ಇನ್ನೊಂದು ಹಳ್ಳಿಯ ಜನಸಂಖ್ಯೆ 11,089
ಎರಡು ಹಳ್ಳಿಯ ಒಟ್ಟು ಜನಸಂಖ್ಯೆ 23,478

39) ರಹೀಮನು ಸೋಮವಾರ ಬ್ಯಾಂಕ ಖಾತೆಯಲ್ಲಿ
ಜಮಾ ಮಾಡಿದ ಹಣ 44,500
ಮಂಗಳವಾರ ಬ್ಯಾಂಕ ಖಾತೆಯಲ್ಲಿ ಜಮಾ ಮಾಡಿದ ಹಣ 24,320
ಈಗ ರಹಿಮನ ಖಾತೆಯಲ್ಲಿ ಇರುವ ಒಟ್ಟು ಹಣ 68,820

V 40) ಪುಸ್ತಕ ವ್ಯಾಪಾರಿಯು ಮೊದಲ ದಿನ ಮಾರಾಟ ಮಾಡಿದ ಪುಸ್ತಕಗಳು 26,817
ಎರಡನೇ ದಿನ ಮಾರಾಟ ಮಾಡಿದ ಪುಸ್ತಕಗಳು 17,794
ಅವನು ಮಾರಾಟ ಮಾಡಿದ ಒಟ್ಟು ಪುಸ್ತಕಗಳು 44,611

41) ರಕ್ಷಿತ ಅರಣ್ಯ ಪ್ರದೇಶದಲ್ಲಿ ಇರುವ ಸಸಿಗಳು 26,759
ವನಮಹೋತ್ಸವ ಸಮಯದಲ್ಲಿ ನೆಟ್ಟ ಸಸಿಗಳು 13,842
ರಕ್ಷಿತ ಅರಣ್ಯ ಪ್ರದೇಶದಲ್ಲಿ ಇರುವ ಒಟ್ಟು ಸಸಿಗಳು 40,601

42) ಹಾಲಿನ ಸಂಘವು ಮೊದಲ ವಾರದಲ್ಲಿ ಸಂಗ್ರಹಿಸಿದ ಹಾಲು = 15,029
ಎರಡನೇ ವಾರದಲ್ಲಿ ಸಂಗ್ರಹಿಸಿದ ಹಾಲು =16,826
